# ತಮ್ಮವರಿಗೋಸ್ಕರ ಬದುಕುವವಳು ಹೆಣ್ಣು :ಸಂಯುಕ್ತ




ಉದಯರಶ್ಮಿ ನ್ಯೂಸ್

ಮುದ್ದೇಬಿಹಾಳ: ಸಮಾಜದಲ್ಲಿ ತಮ್ಮ ಕಷ್ಟಗಳನ್ನು ಮರೆತು, ತನಗಾಗಿ ಅಲ್ಲದೇ ತಮ್ಮವರಿಗೋಸ್ಕರ ಬದುಕುವವಳು ಹೆಣ್ಣು ಅವಳು ಮನಸ್ಸು ಮಾಡಿದಲ್ಲಿ ಇಡೀ ಜಗತ್ತನ್ನೇ ಆಳಬಲ್ಲಳು ಎಂದು ವಿಜಯಪುರದ ಡಿ.ಸಿ.ಸಿ ಬ್ಯಾಂಕ್ ನಿರ್ದೇಶಕಿ ಸಂಯುಕ್ತ ಪಾಟೀಲ ಹೇಳಿದರು.

ತಾಲೂಕಿನ ಕುಂಟೋಜಿ ಸಂಸ್ಥಾನ ಹಿರೇಮಠದ ಡಾ.ಚನ್ನವೀರ ದೇವರ ಪಟ್ಟಾಧಿಕಾರ ಮಹೋತ್ಸವದ ಅಂಗವಾಗಿ ನಡೆದ ಮಹಿಳಾ ಸಂಪದ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಅವರು ಮಾತನಾಡಿದರು.

ಸಧ್ಯದ ಕಾಲಘಟ್ಟದಲ್ಲಿ ಹಣಕ್ಕೆ, ಆಸ್ತಿಗೆ ಇರುವ ಮೌಲ್ಯಕ್ಕಿಂತ ಹೆಚ್ಚಿಗೆ ವಿದ್ಯೆಗೆ ಬೆಲೆ ಇದೆ. ಗಳಿಸಿದ ಹಣ, ಆಸ್ತಿ, ಸಂಪತ್ತು ಹಾಳಾಗಬಹುದು ಆದರೆ ವಿದ್ಯೆ ಯಾವತ್ತೂ ಹಾಳಾಗಲಾರದು. ಪ್ರತಿಯೊಬ್ಬರೂ ನಿಮ್ಮ ಮಕ್ಕಳಿಗೆ ವಿದ್ಯೆ ಕೊಡಿಸಬೇಕು. ಗಂಡು ಮಕ್ಕಳಷ್ಟೇ ಹೆಣ್ಣು ಮಕ್ಕಳಿಗೂ ಸಮಾನತೆ ಇರುವ ಸಧ್ಯದ ಬೆಳವಣಿಗೆಯಲ್ಲಿ ನಿಮ್ಮ ಮಗು ಹೆಣ್ಣು ಅಂತಾ ವಿದ್ಯೆಯಿಂದ ವಂಚಿತರಾಗಿ ಮಾಡಿದಲ್ಲಿ ಆ ಮಗು ಮುಂದೆ ಕಣ್ಣೀರಿಡುವ ಪರಿಸ್ಥಿತಿ ಎದುರಾಗಬಹುದು ಎಂದರು.

ಸ್ವಯಂಭೂ ಆರ್ಟ್ ಫೌಂಡೇಶನ್ ನ ಸಂಸ್ಥಾಪಕಿ ದೀಕ್ಷಾ ಬಿಸೇ ಮಾತನಾಡಿ, ಪ್ರತೀ ಹೆಣ್ಣು ಮಗುವಿಗೆ ವಿದ್ಯೆಯ ಜೊತೆಗೆ ಕಲೆ ಸಂಸ್ಕೃತಿಯನ್ನೂ ಕಲಿಸಬೇಕು. ನಮ್ಮ ಸಂಸ್ಥೆಯಲ್ಲಿ ಬಡ ಮತ್ತು ಅನಾಥ ಮಕ್ಕಳಿಗೆ ಉಚಿತ ನೀಡುವ ಸೇವೆ ನೀಡುತ್ತಿರುವದಾಗಿ ತಿಳಿಸಿದರು.

ಸಂಗೂರಿನ ರುದ್ರಮುನೀಶ್ವರ ಮಠದ ಚನ್ನರುದ್ರಮುನಿ ಶಿವಾಚಾರ್ಯ ಸ್ವಾಮಿಗಳು ದಿವ್ಯ ಸಾನಿಧ್ಯ ವಹಿಸಿದ್ದರು. ಗಡಿ ಗೌಡಗಾಂವದ ಹಾವಗಿ ಶಾಂತಲಿಂಗೇಶ್ವರಮಠದ ಶಾಂತವೀರ ಶಿವಾಚಾರ್ಯ ಸ್ವಾಮಿಗಳು ಪುರಾಣ ನುಡಿಗಳನ್ನಾಡಿದರು.

ಸಾಧನಾ ಮಹಿಳಾ ಒಕ್ಕೂಟದ ಅಧ್ಯಕ್ಷೆ ಗಿರಿಜಾ ಕಡಿ, ಗ್ರಾ.ಪಂ ಉಪಾಧ್ಯಕ್ಷ ನಂದಾ ಬಾಗೇವಾಡಿ, ಮಾಜಿ ಅಧ್ಯಕ್ಷೆ ಇಂದ್ರಭಾಯಿ ಪಾಟೀಲ, ಯಶಸ್ವಿನಿ ಮಹಿಳಾ ಸಂಘದ ಅಧ್ಯಕ್ಷೆ ಸಿದ್ದಮ್ಮ ಒಣರೊಟ್ಟಿ ಸೇರಿದಂತೆ ಇತರರು ಭಾಗಿಯಾಗಿದ್ದರು.

> ಹೆಣ್ಣು ಮಕ್ಕಳಿಗೆ ಹುಟ್ಟಿನಿಂದಲೇ ಪದ್ಧತಿ ಸಂಸ್ಕಾರವನ್ನು ಹೆಚ್ಚಾಗಿ ಕಲಿಸಲಾಗತ್ತೆ. ಇತರರಿಗಾಗಿ ಬದುಕುವದನ್ನು ಕಲಿಸ್ತಾರೆ ಹಾಗಾಗಿ ಹೆಣ್ಣುಮಕ್ಕಳು ಹುಟ್ಟಿನಿಂದಲೇ ನಾಯಕಿಯರು.
>
> – ಸಂಯುಕ್ತ ಪಾಟೀಲ, ಡಿಸಿಸಿ ಬ್ಯಾಂಕ್ ನಿರ್ದೇಶಕಿ, ವಿಜಯಪುರ.

# ಸಮ ಸಮಾಜ ನಿರ್ಮಾಣ ಮಾಡುವ ಶಕ್ತಿ ಸಾಹಿತ್ಯಕ್ಕಿದೆ :ಭಜಂತ್ರಿ

ಉದಯರಶ್ಮಿ ನ್ಯೂಸ್

ವಿಜಯಪುರ: ಕನ್ನಡ ಸಾಹಿತ್ಯ ಪರಿಷತ್ತಿಗೆ ನೂರು ವರ್ಷಗಳ ಇತಿಹಾಸವಿದೆ. ಈ ಮುಖಾಂತರ ನಾಡು ನುಡಿ ಸಂಸ್ಕೃತಿ ಗಾಗಿ ಶ್ರಮಿಸಿದ ಜೀವಿಗಳು ಸ್ಮರಿಸುವ ಮತ್ತು ಸಮಾಜಕ್ಕೆ ಸಂದೇಶ ನೀಡುವ ಕೆಲಸ ಮಾಡುತ್ತ ಬಂದಿದೆ ಎಂದು ದೊಡ್ಡಣ್ಣ ಭಜಂತ್ರಿ ಅಭಿಪ್ರಾಯ ವ್ಯಕ್ತಪಡಿಸಿದರು.

ಸೋಮವಾರ ವಿಜಯಪುರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಸಭಾ ಭವನದಲ್ಲಿ ಜರುಗಿದ ಮ ಮ ಹುಂಡೇಕಾರ ಸಾ ಮ ಹುಂಡೇಕಾರ ಅವರ ಸ್ಮರಣಾರ್ಥ ಏರ್ಪಡಿಸಿದ ದತ್ತಿ ಉಪನ್ಯಾಸ ಉದ್ಘಾಟಿಸಿ ಅವರು ಮಾತನಾಡಿದರು.

ಸಮಾಜದಲ್ಲಿರುವ ಮೇಲುಕೀಳು ತೊಡೆದು ಸಮ ಸಮಾಜ ನಿರ್ಮಾಣ ಮಾಡುವ ಶಕ್ತಿ ಸಾಹಿತ್ಯಕ್ಕೆ ಇದೆ. ಪ್ರತಿ ದಿನವೂ ಕ್ರಿಯಾಶೀಲವಾಗಿ ಸಾಹಿತ್ಯದ ಚಟುವಟಿಗಳು ವಿಜಯಪುರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಮಾಡುತ್ತ ಬಂದಿದೆ ಈ ರೀತಿ ಸಮಾಜ ತಿದ್ದುವ ಶಕ್ತಿ ಕನ್ನಡ ಸಾಹಿತ್ಯ ಪರಿಷತ್ತಿಗೆ ಇದೆ ಎಂದರು.


ಉಪನ್ಯಾಸಕರಾಗಿ ಮಲ್ಲಮ್ಮ ಬಿರಾದಾರ ಅವರು ಜನಪದ ಸಾಹಿತ್ಯ ಕುರಿತು ಮಾತನಾಡುತ್ತ, ಜನಪದ ಸಾಹಿತ್ಯ ಸಾವನ್ನು ಧಿಕ್ಕರಿಸುವ ಜೀವಂತ ಪಳೆಯುಳಿಕೆ, ಮಣ್ಣನ್ನು ಪೂಜಿಸುವ ಮತ್ತು ಪ್ರೀತಿಸುವ ಸಂಸ್ಕಾರ ಜನಪದರಿಗಿದೆ, ಜನಪದ ಸಾಹಿತ್ಯ ಕಲೆಗಳು ಮಾನವ ಸಂಸ್ಕೃತಿ ಸಂಪ್ರದಾಯಗಳ ಆಚರಣೆ ಸಮಾಜದಲ್ಲಿ ಸಾಮರಸ್ಯ ತರುತ್ತವೆ ಎಂದರು.

ಸಂಗಮೇಶ ಬದಾಮಿ ಅವರು ಮಾತನಾಡಿ, ವಿಜಯಪುರ ಜಿಲ್ಲೆಯಲ್ಲಿ ರಂಗಭೂಮಿ ಬೆಳದು ಬಂದ ಬಗೆ ಮತ್ತು ಅದು ಸಮಾಜಕ್ಕೆ ನೀಡಿದ ಕಾಣಿಕೆ ಕುರಿತು ಮಾತನಾಡುತ್ತ ರಂಗಭೂಮಿ ಸಮಾಜದ ಕನ್ನಡಿ, ಅದು ನಮ್ಮ ಬಿಂಬ ಪ್ರತಿನಿಧಿಸುತ್ತದೆ, ಸಾಂಸ್ಕೃತಿಕ ನಿರ್ಮಾಣ ಮಾಡುವಲ್ಲಿ ರಂಗಭೂಮಿ ಪಾತ್ರ ದೊಡ್ಡದು ಎಂದರು.

ಮುಖ್ಯ ಅತಿಥಿಗಳಾಗಿ ಡಾ ಸುಮಾ ಬೋಳರಡ್ಡಿ ಮಾತನಾಡಿದರು.

ಕಾರ್ಯಕ್ರಮದ ಅಧ್ಯಕ್ಷ ಸ್ಥಾನವಹಿಸಿ ಮಾತನಾಡಿದ ಡಾ ಸಂಗಮೇಶ ಮೇತ್ರಿ, ವಿಜಯಪುರ ಜಿಲ್ಲೆ ಜನಪದ ರಂಗಭೂಮಿಯ ಹೆಬ್ಬಾಗಿಲು, ಜನಪದ ಆಟಗಳು ಉತ್ತರ ಕರ್ನಾಟಕ ತುಂಬ ಬೆಳಯಲು ಕಾರಣ ವಿಜಯಪುರ ಜಿಲ್ಲೆಯ ರಂಗ ಕಲಾವಿದರು ಅದೃಷ್ಯಪ್ಪ ವಾನ್ವಿ ಅಂತಹ ಕಲಾವಿದರ ಹುಟ್ಟೂರು ವಿಜಯಪುರ ಜಿಲ್ಲೆಯಾಗಿದೆ ಎಂದರು.

ವೇದಿಕೆ ಮೇಲೆ ದತ್ತಿ ದಾನಿಗಳಾದ ವಿವೇಕ ಹುಂಡೇಕಾರ, ವಿಜಯ ಹುಂಡೇಕಾರ, ಎಂ ಎ ಅವಟಿ ದತ್ತಿ ಸಂಚಾಲಕರಾಸ



ರಾಜಾಸಾಹೇಬ ಶಿವನಗುತ್ತಿ ಉಪಸ್ಥಿತಿತರಿದ್ದರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಅಧ್ಯಕ್ಷ ಹಾಸಿಂಪೀರ ವಾಲೀಕಾರ ಸ್ವಾಗತಿಸಿ ಪರಿಚಯಿಸಿದರು. ಪ್ರಾಸ್ತಾವಿಕವಾಗಿ ಸುಖದೇವಿ ಅಲಬಾಳಮಠ ಮಾತನಾಡಿದರು. ಕಾರ್ಯಕ್ರಮ ದಲ್ಲಿ ವಿಜಯಪುರ ನಗರ ಘಟಕ ಅಧ್ಯಕ್ಷೆ ಅನ್ನಪೂರ್ಣ ಬೆಳ್ಳಣ್ಣವರ, ತಿಕೋಟಾ ತಾಲೂಕ ಅಧ್ಯಕ್ಷ ಸಿದ್ದಾಮಯ್ಯ ಲಕ್ಕುಂಡಿಮಠ, ಕಮಲಾ ಮುರಾಳಿ, ವಿದ್ಯಾವತಿ ಅಂಕಲಗಿ, ರಜಾಕ ಮುಲ್ಲಾ, ರಮೇಶ ಜಾದವ , ಜಿ ಎಸ್ ಬಳ್ಳೂರ , ರಾಮನಗೌಡ ಪಾಟೀಲ, ಸುನೀಲ್ ಒಣರೊಟ್ಟಿ, ಶಾಂತಾ ವಿಭೂತಿ, ಎಸ್ ಜಿ ಜಂಗಮಶೆಟ್ಟಿ, ಕೆ ಎಫ್ ಅಂಕಲಗಿ, ಗಂಗಮ್ಮ ರೆಡ್ಡಿ, ಎ ಜಿ ಪಾಟೀಲ, ಅಲಿಸಾಬ ಕಡಕೆ, ಅಹ್ಮದ ವಾಲೀಕಾರ, ಎಂ ಎಂ ಅಂದಾನಿಮಠ, ಅನಿತಾ ಕಾಂಬಳೆ, ಈರಣ್ಣಾ ಮಾಮನೆ,

ಶರಣಪ್ಪ ಬಿರಾದಾರ ಮುಂತಾದದವರು ಉಪಸ್ಥಿತರಿದ್ದರು.

ಮಹಾದೇವಿ ತೆಲಗಿ ನಿರೂಪಿಸಿದರು.

# ಸುಗಲಾಬಾಯಿ ಜಾನಪದ ಪ್ರತಿಷ್ಠಾನಕ್ಕೆ ಪ್ರಶಸ್ತಿ

ಉದಯರಶ್ಮಿ ನ್ಯೂಸ್

ದೇವರಹಿಪ್ಪರಗಿ: ಕಾರ್ಯ ನಿರತ ಪತ್ರಕರ್ತರ ಸಂಘ ದೇವರಹಿಪ್ಪರಗಿ ಮತ್ತು ಕನ್ನಡ ಜಾನಪದ ಪರಿಷತ್ ಜಿಲ್ಲಾ ಘಟಕ ವಿಜಯಪುರ ವತಿಯಿಂದ ದೇವರಹಿಪ್ಪರಗಿ ತಾಲೂಕಿನ ಪಡಗಾನೂರ ಗ್ರಾಮದಲ್ಲಿ ಏರ್ಪಡಿಸಿದ "ಕರ್ನಾಟಕ ಸುವರ್ಣ ಸಂಭ್ರಮಾಚರಣೆ " ಕಾರ್ಯಕ್ರಮದಲ್ಲಿ ಪಡಗಾನೂರಿನ ಮಾತೋಶ್ರೀ ಸುಗಲಾಬಾಯಿಗೌಡತಿ ಪಾಟೀಲ ಜಾನಪದ ಪ್ರತಿಷ್ಠಾನ (ರಿ)ವು ಜಾನಪದ ಕ್ಷೇತ್ರದಲ್ಲಿ 6 ವರ್ಷಗಳಲ್ಲಿ 40 ಕಾರ್ಯಕ್ರಮ ಹಮ್ಮಿಕೊಂಡು ಜಾನಪದ ಉಪನ್ಯಾಸ, ಜಾನಪದ ಕಲಾ ಪ್ರದರ್ಶನ, ಕಲಾವಿದರ ಸನ್ಮಾನ, ಸಾಧಕರ ಸನ್ಮಾನ ಸೇರಿದಂತೆ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಜಾನಪದ ಉಳಿವಿಗಾಗಿ ಮಾಡಿದ ಸೇವೆಯನ್ನು ಪರಿಗಣಿಸಿ ರಾಜ್ಯ ಮಟ್ಟದ "ಸುವರ್ಣ ಕರ್ನಾಟಕ ಪ್ರಶಸ್ತಿ" ನೀಡಲಾಯಿತು.




ಪ್ರತಿಷ್ಠಾನದ ಅಧ್ಯಕ್ಷ ವೀರೇಶಗೌಡ ಪಾಟೀಲ (ಮಿಣಜಗಿ) ಯವರಿಗೆ ವಿಜಯಪುರ ಸಂಸದ ರಮೇಶ ಜಿಗಜಿಣಗಿ, ದೇವರಹಿಪ್ಪರಗಿ ಶಾಸಕ ರಾಜುಗೌಡ ಪಾಟೀಲ, ಮಾಜಿ ಶಾಸಕ ಅಶೋಕ ಶಾಬಾದಿ, ಕಾಂಗ್ರೆಸ್ ಮುಖಂಡ ಡಾ ಪ್ರಭುಗೌಡ ಲಿಂಗದಳ್ಳಿ , ಕಾನಿಪ ಜಿಲ್ಲಾಧ್ಯಕ್ಷ ಸಂಗಮೇಶ ಚೂರಿ ಕನ್ನಡ ಜಾನಪದ ಪರಿಷತ್ ಜಿಲ್ಲಾಧ್ಯಕ್ಷ ಬಾಳನಗೌಡ ಪಾಟೀಲ, ಕಾನಿಪ ತಾಲೂಕಾಧ್ಯಕ್ಷ ಸಂಗಮೇಶ ಉತ್ನಾಳ, ಡಿ ಸಿ ಬ್ಯಾಂಕ್ ನಿರ್ದೇಶಕ ಹಣಮಂತ್ರಾಯಗೌಡ ಪಾಟೀಲ, ಗ್ರಾಂ ಪಂ ಅಧ್ಯಕ್ಷೆ ಮಹಾದೇವಿ ಆಕಳವಾಡಿ, ಉಪಾಧ್ಯಕ್ಷೆ ಕಸ್ತೂರಿ ಹೊಸಟ್ಟಿ ಪ್ರಶಸ್ತಿ ಪ್ರದಾನ ಮಾಡಿದರು.

# ಚಿಮ್ಮಡ ಮತಗಟ್ಟೆಗೆ ಸ.ಚುನಾವಣಾಧಿಕಾರಿ ಭೇಟಿ

ಉದಯರಶ್ಮಿ ನ್ಯೂಸ್

ಚಿಮ್ಮಡ: ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ಗ್ರಾಮದ ಮತಗಟ್ಟೆಗಳಿಗೆ ತೇರದಾಳ ಮತಕ್ಷೇತ್ರದ ಸಹಾಯಕ ಚುನಾವಣಾಧಿಕಾರಿ ಹಾಗೂ ವಿಶೇಷ ಜಿಲ್ಲಾಧಿಕಾರಿಗಳಾದ ಎಸ್. ಎಂ. ಮುಲ್ಲಾ ಭೇಟಿನೀಡಿ ಪರಿಶೀಲನೆ ನಡೆಸಿದರು.

ಗ್ರಾಮದ ಸರಕಾರಿ ಪ್ರೌಢಶಾಲೆ ಮತ್ತು ಸರಕಾರಿ ಕನ್ನಡ ಗಂಡು ಮಕ್ಕಳ ಹಿರಿಯ ಪ್ರಾಥಮಿಕ ಶಾಲೆಗಳ ಮತಗಟ್ಟೆ ಕೇಂದ್ರಗಳಿಗೆ ಭೇಟಿನೀಡಿ ಅಲ್ಲಿನ ಗಾಳಿ ಬೆಳಕು ಶೌಚಾಲಯ ವ್ಯವಸ್ಥೆ ಹಾಗೂ ಪೀಠೋಪಕರಣಗಳ ವ್ಯವಸ್ಥೆಗಳ ಕುರಿತು ಮಾಹಿತಿ ಪಡೆದರು. ಗ್ರಾಮದ ಸರಕಾರಿ ಪ್ರೌಢಶಾಲೆಯಲ್ಲಿ ಪೀಠೋಪಕರಣಗಳ ಕೊರತೆ,



ಹಾಗೂ ಸರಕಾರಿ ಕನ್ನಡ ಗಂಡು ಮಕ್ಕಳ ಹಿರಿಯ ಪ್ರಾಥಮಿಕ ಶಾಲೆಯ ಮತಗಟ್ಟೆ ಮಳೆಗೆ ಸೋರುತ್ತಿರುವ ಕುರಿತು ಮಹಿತಿ ಪಡೆದು ಅವುಗಳ ಪರಿಹಾರ ಇಲ್ಲವೇ ಪರ್ಯಾಯ ವ್ಯವಸ್ಥೆ ಕೈಗೊಳ್ಳುವ ಕುರಿತು ವರದಿ ಸಲ್ಲಿಸಲಾಗುವುದೆಂದು ಸಹಾಯಕ ಚುನಾವಣಾಧಿಕಾರಿ ಎಸ್. ಎಂ. ಮುಲ್ಲಾ ತಿಳಿಸಿದರು.

ತೇರದಾಳ ವಿಭಾಗದ ಕಂದಾಯ ನಿರೀಕ್ಷಕ ಪಿ.ಆರ್. ಮಠಪತಿ, ಗ್ರಾಮ ಆಡಳಿತ ಅಧಿಕಾರಿ ಮಂಜುನಾಥ ನೀಲನ್ನವರ, ಅರಭಾಜ ಜಮಖಂಡಿ, ಪ್ರೌಢಶಾಲಾ ಮುಖ್ಯೋಪಾಧ್ಯಾಯೆ ಶ್ರೀಮತಿ ಎಂ.ಎಸ್. ಜಿಟ್ಟಿ, ಬಿ.ಎಸ್. ಹಲಗಿ, ಎಪಿಎಂಸಿ ನಿರ್ದೇಶಕ ಪ್ರಭು ಮುಧೋಳ, ಪಿಕೆಪಿಎಸ್ ನಿರ್ದೇಶಕ ನಿಂಗಣ್ಣಾ ಪೂಜಾರಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.

# ವಚನಗಳಲ್ಲಿ ಕಾಯಕ ಮಹತ್ವದ ಅರಿವು :ಅಕ್ಕಿ

ಉದಯರಶ್ಮಿ ನ್ಯೂಸ್

ಇಂಡಿ: ಅನುಭವ ಮಂಟಪದಲ್ಲಿ ಅತ್ಯಂತ ಮೌಲ್ಯಯುತ ವಚನಗಳನ್ನು ರಚಿಸಿ ಇಡೀ ಸಮಾಜಕ್ಕೆ ಕಾಯಕದ ಮಹತ್ವ ಅರಿವು ಮೂಡಿಸಿದವರು ಕಿನ್ನರಿ ಬೊಮ್ಮಯ್ಯ ಎಂದು ಖ್ಯಾತ ಸಂಶೋಧಕ ಡಿ.ಎನ್.ಅಕ್ಕಿ ಗುರುಗಳು ಹೇಳಿದರು.

ಪಟ್ಟಣದ ಹಡಪದ ಅಪ್ಪಣ್ಣ ಪ್ರೌಢಶಾಲೆಯಲ್ಲಿ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತ ವತಿಯಿಂದ ಕಿನ್ನರಿ ಬೊಮ್ಮಯ್ಯ ನವರ ಜೀವನ ಚರಿತ್ರೆ ದತ್ತಿ ಉಪನ್ಯಾಸ ಕಾರ್ಯಕ್ರಮದಲ್ಲಿ ಮಾತನಾಡುತ್ತಿದ್ದರು.

ನಿವೃತ್ತ ಪ್ರಾಚಾರ್ಯೆ ಶೈಲಜಾ ತೆಲ್ಲೂರ ಬಸವಣ್ಣನವರ ವಚನಗಳಿಂದ ಪ್ರಭಾವಿತರಾದ ಕಿನ್ನರ ಬೊಮ್ಮಾಯಿ ಕಾಯಕದ ಮಹತ್ವ ಸಾರಿ, ಸಮಾಜದ ಅಂಕು ಡೊಂಕು ತಿದ್ದಲು ಕಿನ್ನರ ಬೊಮ್ಮಾಯಿ ವಚನಗಳು ಸಹಕಾರಿಯಾಗಿವೆ ಎಂದರು.




ಹಡಪದ ಅಪ್ಪಣ್ಣ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಸಿದರಾಯ ಅಪ್ಪಾಗಿರಿ ಉದ್ಘಾಟಿಸಿದರು.

ದತ್ತಿ ಸ್ಮರಣೆ ಲಿಂ ಚಂದ್ರಕಾಂತ ಗಲಗಲಿ, ಪ್ರಕಾಶ ಬಿರಾದಾರ, ಲಿಂ ಅಣ್ಣಪ್ಪ ಕುಂಬಾರ ಕುರಿತು ಗಂಗಾಬಾಯಿ ಗಲಗಲಿ ದತ್ತಿ ಸ್ಮರಣೆ ಮಾಡಿದರು.

ಭವಾನಿ ಗುಳೆದಗುಡ್ಡ, ಶೈಲಜಾ ಬಿರಾದಾರ, ಸೋನಾಬಾಯಿ ಕಂಬಾರ ದತ್ತಿ ದಾನ ಮಾಡಿದರು.

ಶಹಾಪುರ ಕಸಾಪ ತಾಲೂಕು ಘಟಕ ಸಮಾರಂಭಕ್ಕೆ ಗೌರವಾಧ್ಯಕ್ಷರಾದ ಡಿ.ಎನ್.ಅಕ್ಕಿ ಅವರನ್ನು ಶಸಾಪ ಮತ್ತು ಹಡಪದ ಅಪ್ಪಣ್ಣ ಸಂಸ್ಥೆಯ ವತಿಯಿಂದ ಸನ್ಮಾನಿಸಲಾಯಿತು.

ಶರಣ ಸಾಹಿತ್ಯ ಪರಿಷತ್ತ ಅಧ್ಯಕ್ಷ ಬಿ.ಎಸ್.ಪಾಟೀಲ ಶಿಕ್ಷಕರು, ಎಸ್.ಐ.ಸುಗೂರ, ಎಸ್.ಎ.ಬೋರಾಮಣಿ, ಪಾರ್ವತಿ ದಳವಾಯಿ ಮಾತನಾಡಿದರು.

ಹಡಪದ ಅಪ್ಪಣ್ಣ ಸಂಸ್ಥೆಯ ಅಧ್ಯಕ್ಷ ಸಂತೋಷ ಗವಳಿ, ಆಡಳಿತಾಧಿಕಾರಿ ಪಂಡಿತ ಬಿರಾದಾರ, ಅಂಬಣ್ಣ ಸುಣಗಾರ, ಆರ್.ಎಸ್. ಮೇತ್ರಿ ವೇದಿಕೆಯ ಮೇಲಿದ್ದರು.

# ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ ಕಾರ್ಯಕ್ರಮ ಸಂಪನ್ನ

ಉದಯರಶ್ಮಿ ನ್ಯೂಸ್

ವಿಜಯಪುರ: ನಗರದ ಸುರಸಿಂಗಾರ ಕಲೆ ಮತ್ತು ಸಾಂಸ್ಕೃತಿಕ ಸಂಸ್ಥೆ ಫೆ.25 ರಂದು ನಗರದ ಕಂದಗಲ್ಲ ಶ್ರೀ ಹನುಮಂತ ರಾಯ ರಂಗಮಂದಿರದಲ್ಲಿ ದಿ. ಶ್ರೀ ಭೋಜಣ್ಣ ಬಿಳಗಿಯವರ ಸ್ಮರಣಾರ್ಥ ಏರ್ಪಡಿಸಿದ ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ ಕಾರ್ಯಕ್ರಮ ಯಶಸ್ವಿಯಾಗಿ ಸಂಪನ್ನವಾಯಿತು.

ದೆಹಲಿಯ ಪ್ರಸಿದ್ಧ ಹಿಂದುಸ್ಥಾನಿ ಗಾಯಕರಾದ ಪಂ. ಹರೀಶ ತಿವಾರಿಯವರು ರಾಗ ಭಾಗೇಶ್ರೀ, ಠೂಮರಿ, ಮತ್ತು ಭೈರವಿಯಲ್ಲಿ ತಮ್ಮ ಶಾಸ್ತ್ರೀಯ ಗಾಯನದ ಜೊತೆಗೆ ಅಭಂಗ್ ಮತ್ತ ಭಜನ ಪ್ರಸ್ತುತಪಡಿಸಿ ನೆರೆದ ಸಂಗೀತಾಸ್ತರ ಮನ ತಣಿಸಿದರು. ಇವರಿಗೆ ಪಂ. ಸಧಾಂಶು ಕುಲಕರ್ಣಿ




ಹಾರ್ಮೋನಿಯಂ ಸಾಥ್ ಹಾಗೂ ಡಾ. ರವಿಕಿರಣ ನಾಕೋಡರವರು ತಬಲಾ ಸಾತ್ ಮತ್ತು ತಾನಪುರದಲ್ಲಿ ವಿಶಾಲ್ ಕಟ್ಟಿ, ಕಾಶಿನಾಥ ಭೋಸಲೆ ಸಾಥ ನೀಡಿ ಕಾರ್ಯಕ್ರಮಕ್ಕೆ ಮೆರಗುತಂದರು.

ಈ ಕಾರ್ಯಕ್ರಮಲ್ಲಿ ಡಾ. ಸತೀಶ ಜಿಗಜಿನ್ನಿ, ವಿಶ್ವನಾಥ ಬೀಳಗಿ, ಅರುಣ ಸೋಲಾಪೂರಕರ್, ತ್ರಿವೇಣಿ ಬೀಳಗಿ, ಸಂಗಣ್ಣ ಪಾಟೀಲ, ರಮೇಶ ಚವ್ಹಾಣ, ಸಿಂಗ್, ಪಿ.ಎಸ್. ಕಡೇಮನಿ, ವಿದ್ಯಾಧರ ಸಾಲಿ, ಬಿ.ಎಸ್.ಪಾಟೀಲ, ಲಿಂಗರಾಜ ಕಾಚಾಪೂರ, ಡಾ. ಸದಾಶಿವ ಪವಾರ ಸಹಿತ ವಿಜಯಪುರದ ಎಲ್ಲ ಸಂಗೀತ ಆಸಕ್ತರು ಕಲಾ ರಸಿಕರು ಹೆಚ್ಚಿನ ಸಂಖ್ಯೆಯಲ್ಲಿ ಹಾಜರಿದ್ದು ಕಾರ್ಯಕ್ರಮ ಯಶಸ್ವಿಗೊಳಿಸಿದರು.

# ಶ್ರದ್ಧೆ-ಒಗ್ಗಟ್ಟಿನಿಂದ ಎಲ್ಲ ಕಾರ್ಯ ಯಶಸ್ವಿ :ಪ್ರಭು ಶ್ರೀ

ಉದಯರಶ್ಮಿ ನ್ಯೂಸ್

ಚಿಮ್ಮಡ: ಶ್ರದ್ಧೆ ಹಾಗೂ ಒಗ್ಗಟ್ಟು ಇದ್ದರೆ ಯಾವುದೇ ಕಾರ್ಯವನ್ನು ಯಶಸ್ವಿಯಾಗಿ ನೆರವೇರಿಸಲು ಸಾಧ್ಯವೆಂದು ವಿರಕ್ತಮಠದ ಶ್ರೀ ಪ್ರಭು ಮಹಾಸ್ವಾಮಿಗಳು ಹೇಳಿದರು.

ಗ್ರಾಮದ ಶ್ರೀ ಬನಶಂಕರಿದೇವಿ ಕಲ್ಯಾಣ ಮಂಟಪದಲ್ಲಿ ಆಯೋಜಿಸಲಾಗಿದ್ದ ಪ್ರಭಾವಳಿ ಅರ್ಪಣಾ ಹಾಗೂ ಪ್ರಸಾದ ಪೂಜಾ ಕಾರ್ಯಕ್ರಮದ ನಂತರ ನಡೆದ ಸಭೆಯ ಸಾನಿಧ್ಯ ವಹಿಸಿ ಮಾತನಾಡಿದ ಅವರು, ಯಾವುದೇ ಜಾತಿ, ಮತ, ಪಂಥಗಳನ್ನು ನೋಡದೆ ಪ್ರತಿಯೊಂದು ಸಮುದಾಯವನ್ನು ಒಟ್ಟಿಗೆ ಸೇರಿಸಿಕೊಂಡು ನಡೆಸುತ್ತಿರುವ ಇಂತಹ ಜಾತ್ರೆ, ಧಾರ್ಮಿಕ ಕಾರ್ಯಕ್ರಮ ನಡೆಸುತ್ತಿರುವುದು ಶ್ಲಾಘನೀಯ ಎಂದರು.

ರಘುನಾಥ ಪ್ರೀಯ ಸಾಧು ಮಹಾರಾಜರ ಮಠದ ಶ್ರೀ ಜನಾರ್ಧನ ಮಹಾರಾಜರು ಮಾತನಾಡಿ, ಹಬ್ಬ ಹರಿದಿನಗಳು ಭಾರತೀಯ ಸಂಸ್ಕೃತಿಯ ಪ್ರತೀಕ. ಪ್ರತಿಯೊಂದು ಹಬ್ಬದ ಮೂಲ ಪ್ರಕೃತಿದತ್ತವಾಗಿ ಬಂದಿವೆ ಎಂದರು.



ಕಾರ್ಯಕ್ರಮದ ಅಧ್ಯಕ್ಷತೆಯನ್ನು ಹಟಗಾರ ಸಮಾಜದ ಪ್ರಮುಖ ಶ್ರೀಕಾಂತ ಜಾಡಗೌಡರ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ, ಗ್ರಾ.ಪಂ. ಅಧ್ಯಕ್ಷೆ ಶ್ರೀಮತಿ ಮಾಲಾ ಅಶೋಕ ಮೋಟಗಿ, ರಾಮಣ್ಣ ಮುಗಳಖೋಡ, ಅಣ್ಣಪ್ಪಗೌಡ ಪಾಟೀಲ, ಬಾಳಪ್ಪಾ ಹಳಿಂಗಳಿ, ಬಿ.ಎಸ್. ಪಾಟೀಲ, ಗುರಲಿಂಗಪ್ಪಾ ಪೂಜಾರಿ, ಗುರಪ್ಪಾ ಬಳಗಾರ, ಉಮೇಶ ಪೂಜಾರಿ, ರಾಚಯ್ಯ ಮಠಪತಿ, ಈಶ್ವರ ಬಡಿಗೇರ ಇಲಾಹಿ ಜಮಖಂಡಿ ವೇದಿಕೆಯಲ್ಲಿದ್ದರು.

ಬನಶಂಕರಿದೇವಿ ಸೇವಾ ಸಮೀತಿಯ ಕಾರ್ಯದರ್ಶಿ ಅಶೋಕ ಧಡೂತಿ ಪ್ರಾಸ್ತಾವಿಕವಾಗಿ ಮಾತನಾಡಿದರು,

ಪ್ರೌಢಶಾಲಾ ನಿವೃತ್ತ ಮುಖ್ಯೋಪಾಧ್ಯಾಯ ಕಲ್ಲಪ್ಪ ವಿಜಾಪೂರ ನಿರೂಪಿಸಿ, ವಂದಿಸಿದರು.

ಇದೇ ವೇಳೆ ಶ್ರೀ ಬನಶಂಕರಿ ದೇವಿಗೆ ಸುಮಾರು ಐವತ್ತು ಸಾವಿರ ವೆಚ್ಚದಲ್ಲಿ ನಿರ್ಮಿಸಲಾದ ಪ್ರಭಾವಳಿ ಅರ್ಪಿಸಿದ ದೇವಪ್ಪಾ ಹಾದಿಮನಿ ಸೇರಿದಂತೆ ಹಲವು ದಾನಿಗಳನ್ನು ಸತ್ಕರಿಸಲಾಯಿತು.

## ಏಕಾಂಗಿ ಯಾತ್ರೆ ಮೂಲಕ ಬಿಜೆಪಿಗೆ ಮತಯಾಚನೆ ಮಾಡುತ್ತಿರುವ ಭರತ ಜೈನ್.

# ಸೈಕಲ್ ಮೂಲಕ ಏಕಾಂಗಿಯಾಗಿ ಭಾರತ ಬಚಾವ್ ಯಾತ್ರೆ

ಉದಯರಶ್ಮಿ ನ್ಯೂಸ್

ದೇವರಹಿಪ್ಪರಗಿ: ಭಾರತ ಬಚಾವ್, ಬಿಜೆಪಿಗೆ ಮತ ನೀಡಿ ಎಂಬ ಫಲಕದೊಂದಿಗೆ ವಿವಿಧ ಜಿಲ್ಲೆಗಳಲ್ಲಿ ಧಾರವಾಡದ ಯುವಕನೊಬ್ಬ ಏಕಾಂಗಿ ಪ್ರಚಾರ ಕೈಗೊಂಡು ಗಮನ ಸೆಳೆದರು.

ಪಟ್ಟಣದ ಅಂಬೇಡ್ಕರ್ ವೃತ್ತದಲ್ಲಿ ಮಂಗಳವಾರ ಬೆಳಿಗ್ಗೆ ಆಗಮಿಸಿದ ಧಾರವಾಡದ ಭರತ ಜೈನ್ ಎಂಬ ಯುವಕ ಭಾರತಮಾತೆ, ಕೃಷ್ಣಾರ್ಜುನರು, ಸ್ವಾಮಿ ವಿವೇಕಾನಂದ, ಸಂಗೊಳ್ಳಿ ರಾಯಣ್ಣ, ಬಸವೇಶ್ವರ, ಅಂಬೇಡ್ಕರ್, ಅಟಲ್ ಬಿಹಾರಿ ವಾಜಪೇಯಿ, ಎಪಿಜೆ ಅಬ್ದುಲ್ ಕಲಂ, ಪ್ರಧಾನಿ ನರೇಂದ್ರ ಮೋದಿ, ಅಮಿತ್ ಷಾ, ಯಡಿಯೂರಪ್ಪ, ಜೆ.ಪಿ.ನಡ್ಡಾ, ನಳೀನಕುಮಾರ ಕಟೀಲು ಅವರ ಚಿತ್ರಗಳಿರುವ ಫಲಕದೊಂದಿಗೆ ಏಕಾಂಗಿಯಾಗಿ ಇದೇ ದಿ.18 ರಂದು ಧಾರವಾಡದಿಂದ ಸೈಕಲ್ ಯಾತ್ರೆ ಆರಂಭಿಸಿ ಬೆಳಗಾವಿ, ಬಾಗಲಕೋಟ, ವಿಜಯಪುರ ಮೂಲಕ ಪಟ್ಟಣಕ್ಕೆ ಆಗಮಿಸಿದ ಮಾಹಿತಿ ನೀಡಿದರು.

ಭರತ ತಾವು 10ಸಾವಿರ ಹಣದಲ್ಲಿ ಹೊಸದಾಗಿ ಸೈಕಲ್ ಕೊಂಡು ಯಾತ್ರೆಯ ಮೂಲಕ ಕಲಬುರಗಿ, ರಾಯಚೂರ, ಬಳ್ಳಾರಿ ಸೇರಿದಂತೆ ಕರ್ನಾಟಕದ ಹೆಚ್ಚು ಜಿಲ್ಲೆಗಳನ್ನು ತಲುಪುವ ವಿಶ್ವಾಸ ವ್ಯಕ್ತಪಡಿಸಿ ಚುನಾವಣೆಯ ಮತದಾನದ 10 ದಿನಗಳ ಮುಂಚಿತ ಯಾತ್ರೆ ಮುಕ್ತಾಯಗೊಳಿಸುವ ವಿವರ ನೀಡಿದರು. ಯಾತ್ರೆಯಲ್ಲಿ ತೆರಳುತ್ತಿರುವ ತಾವು ಗ್ರಾಮಗಳ ಹಾಗೂ ತೋಟದ ಜನತೆಗೆ ಕಳೆದ 9 ವರ್ಷಗಳಲ್ಲಿ ಪ್ರಧಾನಿ ನರೇಂದ್ರ ಮೋದಿಯವರ ಸಾಧನೆಗಳನ್ನು ವಿವರಿಸಿ ಈ ಬಾರಿಯೂ ಬಿಜೆಪಿಗೆ ಮತ ನೀಡಲು ವಿನಂತಿಸುತ್ತೇನೆ ಎಂದರು.

ಯಾತ್ರೆಯ ಆರಂಭದಿಂದ ತಮಗೆ ಗ್ರಾಮಗಳಲ್ಲಿ ಜನತೆ ಹಾಗೂ ಬಿಜೆಪಿ ಕಾರ್ಯಕರ್ತರು ನೆರವು ನೀಡಿದ ಬಗ್ಗೆ ಹಾಗೂ ಕೆಲವು ಗ್ರಾಮಗಳಲ್ಲಿ ಕೆಲವರು ಅನಗತ್ಯ ಕಿರಿಕಿರಿ ಉಂಟುಮಾಡಿದ ಘಟನೆಗಳ ಕುರಿತು ಮಾಹಿತಿ ನೀಡಿದರು.



# ಸೋಲಿಲ್ಲದ ಸರದಾರ

## ಪ್ರೇಮರಶ್ಮಿ



– ಡಾ. ರಾಜಶೇಖರ ನಾಗೂರ
("ನಮ್ಮ ಕಥಾ ಅರಮನೆ" ಬರಹಗಾರರು)
ಉದಯರಶ್ಮಿ ದಿನಪತ್ರಿಕೆ

ಸೋಲು ಗೆಲುವು ಎನ್ನುವ ಮಾನದಂಡಗಳು ಮನುಷ್ಯ ಪ್ರಪಂಚದಲ್ಲಿ ಮಾತ್ರ ಇರುವಂತಹವು. ಸೋಲಲು ಒಪ್ಪದ ಮನುಷ್ಯ ಸದಾ ಗೆಲುವು ತನ್ನದೇ ಆಗಿರಬೇಕು ಎನ್ನುತ್ತಾನೆ. ಕೊನೆಯ ಪಕ್ಷ ತಾನು ಗೆಲ್ಲದಿದ್ದರೂ ತನಗಾಗದವರು ಸೋಲಬೇಕು ಎನ್ನುವ ಹೀನ ಮನಸ್ಥಿತಿ ಈ ಮನುಷ್ಯ ಹೊಂದಿದ್ದಾನೆ.

ಏನೇ ಇರಲಿ, ಯಾವುದೇ ಕ್ಷೇತ್ರವಿರಲಿ ಉದಾಹರಣೆಗೆ ಚಲನಚಿತ್ರ, ಬರಹ ಲೋಕ, ರಾಜಕೀಯ, ಹೀಗೆ ಪ್ರತಿ ಕ್ಷೇತ್ರದಲ್ಲಿ ಮನುಷ್ಯ ಸೋಲಿಲ್ಲದ ಸರದಾರನಾಗಬೇಕೆಂದು ಬಯಸುತ್ತಾನೆ ಆದರೆ ಪ್ರಪಂಚದ ಯಾವುದೇ ಮೂಲೆಯನ್ನು ಹುಡುಕಿ, ಯಾವುದೇ ಕ್ಷೇತ್ರವನ್ನು ಅವಲೋಕಿಸಿ ನೋಡಿ, ಎಲ್ಲಾ ಸಮಯದಲ್ಲಿ ಎಲ್ಲರ ನಡುವೆ ಸೋಲದೆ, ಸದಾ ಗೆಲುವು ಸಾಧಿಸಿ ಸರದಾರನಾಗಿ ಉಳಿದ ಯಾವ ವ್ಯಕ್ತಿಯ ಉಲ್ಲೇಖ ನಮಗೆ ಸಿಗಲಾರದು.

ಹೀಗಾಗಿ ನನ್ನ ವೈಯಕ್ತಿಕ ನೆಲೆಯಲ್ಲಿ, ನನ್ನ ವ್ಯಕ್ತಿಗತ ಅನುಭವದಲ್ಲಿ ನಾನು ನಂಬಿರುವುದೇನೆಂದರೆ 'ನಾನು ನನ್ನ ಬದುಕಿನಲ್ಲಿ, ಸೋಲಿಲ್ಲದ ಸರದಾರನಾಗಿರಬೇಕೇ ಹೊರತು ಇನ್ನೊಬ್ಬರ ಬದುಕಿನಲ್ಲಲ್ಲ' ಅಂದರೆ ನಮ್ಮ ವೈಯಕ್ತಿಕ ಬದುಕಲ್ಲಿ ನಮ್ಮನ್ನು ಸೋಲಿಸಲು ಬರುವ ಸಂಕಷ್ಟಗಳನ್ನು ಎದುರಿಸಿ ಎದ್ದು ನಿಂತು ಬದುಕು ಮಾಡುವುದೇ ನಮ್ಮ ಗೆಲುವು. ಆಗ ಮಾತ್ರ ನಾವು ನಮ್ಮ ಬದುಕಿನ ಸೋಲಿಲ್ಲದ ಸರದಾರರಾಗುತ್ತೇವೆ.

ಬದುಕಿನ ದಾರಿಯಲ್ಲಿ ಹಣದ ಸಮಸ್ಯೆ ಬರಬಹುದು, ಆರೋಗ್ಯ ಸಮಸ್ಯೆ ಬರಬಹುದು, ಆಸ್ತಿ ಅಂತಸ್ತಿನ ಸಮಸ್ಯೆ ಎದುರಾಗಬಹುದು, ಯಾರೋ ನಮ್ಮನ್ನು ಬ್ಲ್ಯಾಕ್ ಮೇಲ್ ಮಾಡಬಹುದು ಹೀಗೆ ಏನೇ ಸವಾಲುಗಳು ಬಂದರೂ ನಮ್ಮೊಳಗೆ ನಾವು ಸೋಲಬಾರದು.

ನೆನಪಿಡಿ, ನಡೆಯುವಾಗ ಬಿದ್ದರೆ ಎದ್ದೇಳಬಹುದು, ಬೆಟ್ಟದ ಮೇಲಿಂದ ಬಿದ್ದರೆ ಎದ್ದೇಳಬಹುದು ಆದರೆ ಯಾವ ಮನುಷ್ಯ ತನ್ನ ದೃಷ್ಟಿಯಲ್ಲಿ ತಾನೇ ಬೀಳುವನೋ ಅವನನ್ನು ಯಾವ ಕಾಲಕ್ಕೂ ಯಾರೂ ಎಬ್ಬಿಸಲು ಸಾಧ್ಯವಿಲ್ಲ. ಎಲ್ಲಕ್ಕಿಂತ ಹೆಚ್ಚಾಗಿ ನಮ್ಮ ಆಂತ–



ಪ್ರೇಮಿಗಳ ವಾರದ ವಿಶೇಷ

ರಿಕ ಪ್ರಪಂಚದಲ್ಲಿ ಬೀಳಬಾರದು ಎಂಬ ದೃಢತೆ ಬಂದಾಗ ಮಾತ್ರ ನಾವು ನಮ್ಮ ಬದುಕಲ್ಲಿ ಸೋಲಿಲ್ಲದ ಸರದಾರರಾಗುತ್ತೇವೆ.

ಗೆಲುವೆಂದರೆ ಹಣವಲ್ಲ, ಗೆಲುವೆಂದರೆ ಹೆಸರಲ್ಲ, ಗೆಲುವೆಂದರೆ ಇನ್ನೊಬ್ಬರನ್ನು ಅಹಂಕಾರದಿಂದ ತನ್ನ ನಿಯಂತ್ರಣದಲ್ಲಿ–ರಿಸಿಕೊಳ್ಳುವುದಲ್ಲ, ಗೆಲುವೆಂದರೆ ಯಾರನ್ನೋ ನೋಯಿಸುವುದಲ್ಲ, ಗೆಲುವೆಂದರೆ ಗುಲ್ಲೆಬ್ಬಿಸುವುದಲ್ಲ, ಗೆಲುವೆಂದರೆ ಇನ್ನೊಬ್ಬರ ಕಣ್ಣೀರು ಹಾಕಿಸುವುದಲ್ಲ.

ಗೆಲುವೆಂದರೆ ಸ್ವಾಭಿಮಾನದ ಬದುಕು ನಡೆಸುವುದು, ಗೆಲುವೆಂದರೆ ನಿರ್ಭಿಡೆಯಿಂದ ಇರುವುದು, ಗೆಲುವೆಂದರೆ ನಿರ್ಭಯದಿಂದ ಬದುಕುವುದು, ಗೆಲುವೆಂದರೆ ನಯ ವಿನಯದಿಂದ ನಡೆದುಕೊಳ್ಳುವುದು, ಗೆಲುವೆಂದರೆ ಇನ್ನೊಬ್ಬರನ್ನು ಗೌರವಿಸುವುದು, ಗೆಲುವೆಂದರೆ ಇನ್ನೊಬ್ಬರನ್ನು ನಗಿಸುವುದು, ಗೆಲುವೆಂದರೆ ಮತ್ತೊಬ್ಬರನ್ನು ಪ್ರೋತ್ಸಾಹಿಸುವುದು.

ಹೀಗಾಗಿ ಇಷ್ಟು ವರ್ಷಗಳ ನನ್ನ ಬದುಕಿನಲ್ಲಿ, ನಾನು ಓದಿದ ಅಕ್ಷರಗಳಲ್ಲಿ, ಸಾಹಿತ್ಯದಲ್ಲಿ, ನಾನು ಕಂಡ ಇಷ್ಟು ಜನರಲ್ಲಿ ಒಬ್ಬನೇ ಒಬ್ಬ ಸೋತ ವ್ಯಕ್ತಿ ಇದ್ದಾನೆ ಎಂದೆನಿಸಿಲ್ಲ ಏಕೆಂದರೆ ನನ್ನ ದೃಷ್ಟಿಯಲ್ಲಿ ಯಾರೋ ಒಬ್ಬ ಸೋತವ ಎನಿಸಬಹುದು, ನನ್ನ ಮಾನದಂಡದಲ್ಲಿ ಮತ್ತೊಬ್ಬ ಸೋತ ಹಾಗೆ ಕಾಣಬಹುದು ಆದರೆ ಅವರವರ ವೈಯಕ್ತಿಕ ಜೀವನದಲ್ಲಿ ಪ್ರತಿಯೊಬ್ಬರೂ ಅವರ ವೈಯಕ್ತಿಕ ಸವಾಲುಗಳ ಮುಂದೆ ಗೆದ್ದು ಜೀವನ ನಡೆಸುತ್ತಿರುತ್ತಾರೆ ಎಂದರೆ ಅವರೆಲ್ಲ ಅವರವರ ಬದುಕಿನ ಸೋಲಿಲ್ಲದ ಸರದಾರರು ಎಂಬುದು ನನ್ನ ಭಾವನೆ.

ಹಾಗಾದರೆ ಸೋಲಿಲ್ಲದ ಸರದಾರ ಎಂಬುವವರು ಯಾರೂ ಇಲ್ಲವೇ?!

ಉದಾಹರಣೆಯ ಸಹಿತ ಹೇಳುವುದಾದರೆ:

ನನ್ನ ತಿಳುವಳಿಕೆಯ ಕ್ಷಿತಿಜದಲ್ಲಿ ನಾನು ಕಂಡಂತೆ ರಾಮಾಯಣದ ಹನುಮ ಮಾತ್ರ ಸೋಲಿಲ್ಲದ ಸರದಾರ ಎಂದೆನಿಸಿದ್ದು ಸುಳ್ಳಲ್ಲ. ರಾಮ, ಲಕ್ಷಣ, ರಾವಣ, ಸೀತೆ, ಭರತ ಪ್ರತಿಯೊಬ್ಬರೂ ಒಂದಿಲ್ಲ ಒಂದು ಸಮಯದಲ್ಲಿ ದುಃಖಿಯಾಗಿ ಸೋತ ಹಾಗೆ ಕಾಣುತ್ತಾರೆ. ಆದ–'ರೆ ಹನುಮ ಮಾತ್ರ ಎಲ್ಲಾ ಸಮಯದಲ್ಲೂ ಸ್ಥಿತಪ್ರಜ್ಞೆ ಹೊಂದಿ ಸದಾ ಹಸನ್ಮುಖಿಯಾಗಿದ್ದು ಸಮ ಸ್ಥಿತಿಯಲ್ಲಿರುವ ಪಾತ್ರವಾಗಿದ್ದಾನೆ.

ದಾಸನಿಂದ ದೇವನಾದ ಏಕ ಮಾತ್ರ ಪಾತ್ರ ಹನುಮನದು. ಇಡೀ ರಾಮಾಯಣದ ಪಾತ್ರಗಳಲ್ಲಿ ಪ್ರತ್ಯೇಕ ಮಂದಿರ ಹೊಂದಿದ ಕೆಲವೇ ಕೆಲವು ಪಾತ್ರಗಳಲ್ಲಿ ಹನುಮನು ಕೂಡ ಒಬ್ಬ. ಸೀತೆಗೆ ಲಕ್ಷ್ಮಣನಿಗೆ ಪ್ರತ್ಯೇಕ ಮಂದಿರವಿಲ್ಲ. ಆದರೆ ಹನುಮನಿಗೆ ಪ್ರತಿ ಹಳ್ಳಿ, ನಗರಗಳಲ್ಲಿ, ಗಲ್ಲಿ ಗಳ್ಳಿಯಲ್ಲಿ ಪ್ರತ್ಯೇಕ ಮಂದಿರ ಸಿಗುತ್ತದೆ.


ಈ ಸೋಲಿಲ್ಲದ ಸರದಾರನ ಮುಖ್ಯ ಗುಣ ಲಕ್ಷಣಗಳನ್ನು ತಿಳಿದರೆ ನಾವು ಕೂಡ ಸೋಲಿಲ್ಲದ ಸರದಾರರಾಗಬಹುದು.

1) ಹೊಂದಿಕೊಳ್ಳುವ ಗುಣ (Flexible):

ಪ್ರತಿ ಸಂದರ್ಭಕ್ಕೆ ತಕ್ಕಂತೆ ಬಾಗುವ, ಹೊಂದಿಕೊಳ್ಳುವ ಗುಣ ಹನುಮನಲ್ಲಿತ್ತು. ಸೊಳ್ಳೆಯಂತೆ ಸಣ್ಣವನಾಗುವುದು ಗೊತ್ತು, ನೋಡಲಾಗದಷ್ಟು ಬೃಹತ್ ದೈತ್ಯಕಾರವಾಗಿ ಬೆಳೆದು ನಿಲ್ಲುವುದು ಹನುಮನಿಗೆ ತಿಳಿದಿದೆ.

ಸಾಗರೋಲ್ಲಂಘನ ಮಾಡುವಾಗ ಸಾಗರದ ಮಧ್ಯ ದುತ್ತೆಂದು ದೈತ್ಯಕಾರವಾಗಿ ಅಡ್ಡಲಾಗಿ ಬಾಯಿ ತೆರೆದು ನಿಂತ ಸುರಸಾಳ ಮುಂದೆ 32 ಯೋಜನೆಯಷ್ಟು ಎತ್ತರವಾಗಿ ಬೆಳೆದು ನಿಲ್ಲುತ್ತಾನೆ (1ಯೋಜನಾ = 13km). ಅಂ–ದರೆ ಅಂದಾಜು 416 km ಎತ್ತರಕ್ಕೆ ಬೆಳೆದು ನಿಲ್ಲುತ್ತಾನೆ. ಅರ್ಧಕ್ಕಿಂತ ಹೆಚ್ಚಿನ ಕರ್ನಾಟಕದಷ್ಟು ಎತ್ತರ.

ಸೀತಾ ಮಾತೆಯ ಹತ್ತಿರ ಬಂದಾಗ ಸಣ್ಣ ಸಣಕಲು ವಾನರನಾಗಿ ಕಾಲ ಬಳಿ ವಿನಯತೆಯಿಂದ ನಿಂತಿರುತ್ತಾನೆ. ಇವನ ಸಣಕಲು ಆಕಾರ ನೋಡಿ ಇಂತಹ ಸಣ–ಕಲು ವಾನರ ಸೈನ್ಯದಿಂದ ರಾಮ ಈ ರಾವಣನನ್ನು ಗೆಲ್ಲುತಾನೆಯೇ



ಎಂದು ಸಂಶಯ ವ್ಯಕ್ತಪಡಿಸಿದಾಗ ಹನುಮ ಆಕಾಶದೆತ್ತರ ಬೆಳೆದು ನಿಲ್ಲುತ್ತಾನೆ. ಯಾರ ಮುಂದೆ, ಯಾವ ಸಮಯದಲ್ಲಿ ತಮ್ಮ ತಾಕತ್ತನ್ನು ತೋರಿಸಬೇಕು ಅಲ್ಲಿಯೇ ತೋರಿಸಬೇಕು.

ಯಾರಿಗೆ ಈ ಸ್ಥಿತಿಸ್ಥಾಪಕತ್ವ (elasticity) ಗುಣವಿದೆಯೋ ಅವರು ಮಾತ್ರ ಜೀವನದಲ್ಲಿ ಗೆಲ್ಲುತ್ತಾರೆ.

ರಾವಣ ಕಠಿಣ (ಖುರುಜ) ವ್ಯಕ್ತಿತ್ವ ಹೊಂದಿದ್ದ ಏಕೆಂದರೆ ಅವನಲ್ಲಿ ತನಗಿಂತ ಶ್ರೇಷ್ಠ ಯಾರೂ ಇಲ್ಲಾ ಎನ್ನುವ ಘಮಂಡ್ ಇತ್ತು. ಹತನಾದ. ಹೀಗೆ ರಿಜಿಡ್ ಇರುವವರು ಗೆಲ್ಲಲು ಸಾಧ್ಯವೇ ಇಲ್ಲಾ.

2)ಸಮಯಪ್ರಜ್ಞೆ:

ವಾಲಿಯ ವಧೆಯ ನಂತರ ಸುಗ್ರೀವ ರಾಜನಾದ. ರಾಮನಿಗೆ ಮಾತು ಕೊಟ್ಟಂತೆ ಸೀತೆಯ ಹುಡುಕಲು ಸಹಾಯ ಮಾಡುವ ಮಾತನ್ನು ಮರೆತು ವಿಲಾಸಿ ಹವ್ಯಾಸದಲ್ಲಿ ಮುಳುಗಿಬಿಟ್ಟ. ಶಾಂತ ಸ್ವರೂಪ ರಾಮನು ಕೂಡ ಕ್ರೋಧಿತನಾಗಿ ಲಕ್ಷ್ಮಣನಿಗೆ ಹೀಗೆ ಆಜ್ಞೆ ಇತ್ತ "ಯಾವ ಬಾಣದಿಂದ ನಾನು ವಾಲಿಯನ್ನು ಕೊಂದೆನೋ ಅದೇ ಬಾಣದಿಂದ ಸುಗ್ರೀವನನ್ನು ಕೊಂದು ಬಾ" ಎಂದು. ಮೊದಲೇ ಕೋಪಿಷ್ಠ ಲಕ್ಷಣ, ಅಣ್ಣನ ಮಾತುಗಳಿಂದ ಬಿಲ್ಲು ಬಾಣ ಹೊತ್ತು ಸುಗ್ರೀವನನ್ನು ಹುಡುಕಲು ಪ್ರಾರಂಭಿಸಿದ. ಕ್ರೋಧಿತ ಲಕ್ಷ್ಮಣನನ್ನು ತಡೆಯುವ ತಾಕತ್ತು ಯಾರಲ್ಲಿಯೂ ಇರಲಿಲ್ಲ.


ಆಗ ಹನುಮ ಅಲ್ಲಿಗೆ ಬಂದವನೇ ರಾಮನ ಸ್ತುತಿ ಮಾಡಲು ಪ್ರಾರಂಭಿಸಿದ. ರಾಮನ ಸ್ತುತಿ ಮುಗಿಯುವವರೆಗೆ ಲಕ್ಷಣ ಅಲ್ಲಿಂದ ಕದಲಲಾರ ಎಂಬುದು ಹನುಮನಿಗೆ ತಿಳಿದಿತ್ತು. ರಾಮನ ಸ್ತುತಿ ಮುಗಿಯುವುದರೊಳಗೆ ಲಕ್ಷ್ಮಣನ ಕೋಪ ಕಡಿಮೆಯಾಗಿ–ತ್ತು. ಆಗ ಹನುಮ ಅಲ್ಲಿಯ ಪರಿಸ್ಥಿತಿಯನ್ನು ತನ್ನ ಸಮಯ ಪ್ರಜ್ಞೆಯಿಂದ ತಿಳಿಗೊಳಿಸಿದ.

3) ನಿರ್ಭಯತೆ:

ರಾವಣನೆಂದರೆ ದೇವಾನು ದೇವತೆಗಳು ಹೆದರಿ ನಡುಗುತ್ತಿರುವಾಗ ಬಂಧಿಸಿ ಕರೆತಂದ ಹನುಮನು ರಾವಣನ ಮುಂದೆ ನಿರ್ಭಯವಾಗಿ ಹಾವುಗಳ ರಾಶಿಯ ಮಧ್ಯ ದೃಢವಾಗಿ ತಲೆ ಎತ್ತಿ ನಿಂತ ಗರುಡನಂತೆ ನಿರ್ಭಯವಾಗಿ ನಿಂತಿರುತ್ತಾನೆ.

ರಾವಣನ ಮುಂದೆ ತಂದು ನಿಲ್ಲಿಸಿದಾಗ ರಾವಣ ಹೇಳುತ್ತಾನೆ "ನೀನು ನ್ಯಾಯಾಧೀಶ ಎಂದುಕೊಂಡಿರುವೆಯಾ? ತುಚ್ಛ ವಾನರನೇ.. ನಿನ್ನನ್ನು ಇರುವೆಯಂತೆ ಹೊಸೆದು ಹಾಕಬಲ್ಲೆ" ಎನ್ನುತ್ತಾನೆ. ತಕ್ಷಣ ಮರುತ್ತರವಾಗಿ ಹನುಮ ರಾವಣನಿಗೆ ಹೀಗೆ ಉತ್ತರಿಸುತ್ತಾನೆ "ರಾವಣನೇ.. ಅದೇ ಸಣ್ಣ ಇರುವೆ ಆನೆಯ ಕಿವಿಯೊಳಗೆ ಹೋದರೆ ಬೃಹದಾಕಾರದ ಆನೆ ನೃತ್ಯ ಮಾಡಲು ಶುರು ಮಾಡುತ್ತದೆ ಮರೆಯದಿರು". ಎಂದು.

ರಾವಣನ ಎದುರು ಮಾತನಾಡಿದ ವ್ಯಕ್ತಿ ಉಳಿದ ನಿದರ್ಶನವಿರಲಿಲ್ಲ. ಈ ಮಾತಿನಿಂದ ಕೋಪಗೊಂಡ ರಾವಣನು ಕಾಲಭೈರವನ ಮೃತ್ಯುವನ್ನು ಹನುಮನ ಪಕ್ಕಕ್ಕೆ ತಂದು ನಿಲ್ಲಿಸಿಬಿಟ್ಟ. ಆ ಮೃತ್ಯುದೇವತೆಯನ್ನು ನೋಡಿ ಹನುಮ ನಕ್ಕ. ಇದನ್ನು ನೋಡಿ ಇನ್ನಷ್ಟು ಕ್ರೋಧಿತನಾದ ರಾವಣ



"ಹೇ ವಾನರನೇ.. ನಿನ್ನ ಪಕ್ಕಕ್ಕೆ ಮೃತ್ಯು ನಿಂತಿದೆ. ನಿನಗೆ ಹೆದ–ರಿಕೆಯಾಗಿಲ್ಲವೇ ಎಂದು.."

ನಗುತ್ತಾ ಹನುಮ ಹೀಗೆ ಹೇಳಿದ "ರಾವಣನೇ.. 'ಮೃತ್ಯು' ನನ್ನ ಪಕ್ಕಕ್ಕೆ ನಿಂತಿದೆ ನಿಜಾ ಆದ–'ರೆ ಅದು ನಿನ್ನನ್ನೇ ನೋಡುತ್ತಿದೆ" ಎಂದು ಗಹಗಹಿಸಿ ಮತ್ತೆ ನಗುತ್ತಾನೆ. ಈ ನಿರ್ಭಯತೆ ಇದ್ದಾಗ ಗೆಲುವು ಖಚಿತ.

–ಹಾಗೆಯೇ ನೀಲ್ ಆರ್ಮ್‌ಸ್ಟಾಂಗ್ ಹೆದರದೆ ಚಂದ್ರನ ಮೇಲೆ ಮೊದಲ ಬಾರಿ ನಿರ್ಭಯವಾಗಿ ಕಾಲಿಟ್ಟ ಎಂದು ಇತಿಹಾಸದಲ್ಲಿ ಅಮರನಾದ.

–ನ್ಯೂಜಿಲ್ಯಾಂಡ್ ನ ಸರ್ ಎಡ್ಮಂಡ್ ಹಿಲರಿ ನಿರ್ಭಯವಾಗಿದ್ದ ಎಂಬ ಕಾರಣಕ್ಕೆ ಮೌಂಟ್ ಎವರೆಸ್ಟ್ ಏರಿದ ಮೊದಲಿಗ ಎನಿಸಿಕೊಂಡ.

–ಯಾರು ತಮ್ಮನ್ನು ತಾವು ಗೆಲ್ಲುತ್ತಾರೆ ಅವರು ಮಾತ್ರ ಈ ಭಯವನ್ನು ಗೆದ್ದಿರುತ್ತಾರೆ.

–ಈ ನಿರ್ಭಯತೆ ಇದ್ದಾಗ ಯಾವುದೇ ವ್ಯಕ್ತಿ ಸೋಲಿಲ್ಲದ ಸರದಾರನಾಗಬಹುದು. ಹೇಡಿಯಂತೆ ಹೆದರುವ ಜನರು ಬಕೆಟ್ ಹಿಡಿಯುವ ನಡೆಯನ್ನು ನಾವು ಎಲ್ಲೆಲ್ಲಿಯೂ ನೋಡಿರುತ್ತೇವೆ. ಇಂತಹ ಹೇಡಿತನದವರು ಎಂದೆಂದೂ ಇನ್ನೊಬ್ಬರ ಮಾತಿನ ಜೀವನವನ್ನೇ ಜೀವಿಸುತ್ತಾರೆಯೇ ಹೊರತು ಸ್ವಂತದ ಬದುಕಿದೆ ಎಂಬುದನ್ನೇ ಅರಿಯರು.

4) ಶಾಂತತೆ ಮತ್ತು ಪ್ರಸನ್ನತೆ:

ಶ್ರೀ ತುಳಸಿ ದಾಸರ ರಾಮಚ–ರಿತ ಮಾನಸದ ಆರಂಭದಿಂದ ಅಂತ್ಯದವರೆಗೆ ಶಾಂತ ಚಿತ್ತದಿಂದ, ಪ್ರಸನ್ನತೆಯಿಂದ ಇರುವ ಏಕ ಮಾತ್ರ ಪಾತ್ರ ಅದು ಹನುಮನದು.

ಹೀಗೆ ಬದುಕಿನ ಸಣ್ಣ ಪುಟ್ಟ ಸಂದರ್ಭಗಳಿಗೆ ಕ್ಷುಲ್ಲಕ ಕಾರಣಗಳಿಗೆ ವಿಚಲಿತನಾಗದೆ ಶಾಂತವಾಗಿದ್ದು ಪ್ರಸನ್ನವಾಗಿದ್ದರೆ ಮಾತ್ರ ಬದುಕನ್ನು ಗೆಲ್ಲುತ್ತೇವೆ. ನಮ್ಮ ಬದುಕಿನ ಸೋಲಿಲ್ಲದ ಸರದಾರರು ನಾವಾಗುತ್ತೇವೆ.

ಈ ಮೇಲಿನ ಗುಣಗಳನ್ನು ಮೈಗೂಡಿಸಿಕೊಂಡು ಸೋಲನ್ನು ಸೋಲಿಸೋಣ. ಒಳಿತನ್ನೇ ಬಯಸೋಣ. ಬೀಳಿಸಲು ನರಿ ನಾಯಿಗಳಿದ್ದರೆ ಮೇಲೆತ್ತಲು ದೇವರಿದ್ದಾನೆ ಎಂಬ ನಂಬಿಕೆ ನಮ್ಮಲ್ಲಿದ್ದಾಗ ನಾವು ನಿಲ್ಲುತ್ತೇವೆ, ಗೆಲ್ಲುತ್ತೇವೆ.


---

ಉದಯರಶ್ಮಿ ದಿನಪತ್ರಿಕೆ

# ಬೊಜ್ಜು ಎಂಬ ಸತ್ಯ ಮತ್ತು ಡಯಟ್ ಎಂಬ ಮಿಥ್ಯ

ಆ ಮನೆಯ ಯಜಮಾನ ದಿನದ ಮೂರು ಹೊತ್ತು ಅನ್ನವನ್ನು ಉಣ್ಣುತ್ತಾನೆ. ಆದರೆ ಆತನದು ಜೋರಾಗಿ ಗಾಳಿ ಬಿಟ್ಟರೆ ಹಾರಿ ಹೋಗುವಷ್ಟು ಸಣಕಲು ಮೈಕಟ್ಟು. ಹಾಗಾದರೆ ಅನ್ನ ತಿಂದರೆ/ಉಂಡರೆ ಮೈ ಬರುವುದಿಲ್ಲವೇ!??

ಇನ್ನೊಂದು ಮನೆಯಲ್ಲಿ ಒಂದು ಚೂರು ಸಿಹಿಯನ್ನು ಬಾಯಿಗೆ ಹಾಕದ, ಸಕ್ಕರೆಯನ್ನು ತಿನ್ನದ, ಕೇವಲ ಚಪಾತಿ, ರೊಟ್ಟಿ,




● ವೀಣಾ ಎಚ್. ಪಾಟೀಲ್, ಮುಂಡರಗಿ

ತರಕಾರಿ, ಹಣ್ಣುಗಳನ್ನು ಸೇವಿಸುವ ಆ ಮನೆಯ ಪ್ರತಿಯೊಬ್ಬ ಸದಸ್ಯರು ತುಸು ಸ್ಥೂಲಕಾಯರೇ???

ಮತ್ತೊಂದೆಡೆ ಇನ್ನೊಬ್ಬ ವ್ಯಕ್ತಿ ಏನೆಲ್ಲವನ್ನು ತಿಂದು ಉಂಡು ಅರಗಿಸಿಕೊಂಡರೂ ಆತನದ್ದು ಕೃಶ ಶರೀರ. ಹಾಗಾದರೆ ಆತನ ಬೊಜ್ಜು ಹೋಯಿತೆಲ್ಲಿಗೆ ??

ಮತ್ತೂ ಕೆಲವು ಜನ ಅದೆಷ್ಟೇ ವಿವಿಧ ಬಗೆಯ ಡಯಟ್ಗಳನ್ನು ಪಾಲಿಸಿದರೂ ಆ ಸಮಯಕ್ಕೆ ಇಳಿಯುವ ತೂಕ ಕೆಲವೇ ತಿಂಗಳುಗಳಲ್ಲಿ 'ಹೋದೆಯಾ ಪಿಶಾಚಿ ಅಂ–ದರೆ ಬಂದೆ ಗವಾಕ್ಷಿಯಲಿ' ಎಂಬಂತೆ ಮತ್ತೆ ಮತ್ತೆ ಕಾಡುತ್ತದೆ. ಹಾಗಾದರೆ ಅವರ ಡಯೆಟ್ ಸುಳ್ಳೇ!?

ಪ್ರತಿ ಆರು ತಿಂಗಳು, ವರ್ಷಕ್ಕೊಮ್ಮೆ ಪ್ರಕೃತಿ ಚಿಕಿತ್ಸಾ ಕೇಂದ್ರಗಳಲ್ಲಿ ಅವರು ಕೊಡುವ ಆಹಾರವನ್ನು ಸೇವಿಸುತ್ತ, ಅವರು ನೀಡುವ ಎಲ್ಲ ರೀತಿಯ ಚಿಕಿತ್ಸೆಗಳಿಗೆ ಸ್ಪಂದಿಸುವ ಜನರು ಕೂಡ ಆ ಕೇಂದ್ರದಿಂದ ಹೊರಗೆ ಬಂದ ನಂತರ ಕೆಲವೇ ತಿಂಗಳುಗಳಲ್ಲಿ ಮತ್ತೆ ತಮ್ಮ ಮೊದಲಿನ ಗಾತ್ರಕ್ಕೆ ಮರಳುತ್ತಾರೆ.. ಹೀಗೇಕೆ??

ಮೇಲಿನ ಎಲ್ಲ ಪ್ರಶ್ನೆಗಳು ಮೇಲ್ನೋಟಕ್ಕೆ ಸರಳವೆನಿಸಿದರೂ, ಆಳವಾಗಿ ಯೋಚಿಸಿದಾಗ ಉತ್ತರ ಸಿಗದ, ಗೊತ್ತಿದ್ದರೂ ಅರಿವಿಗೆ



ನಿಲುಕದ ಮಿಲಿಯನ್ ಡಾಲರ್ ಪ್ರಶ್ನೆಗಳೇ!!

ಬನ್ನಿ ಕೆಲವು ಉತ್ತರಗಳನ್ನು ನಾವೇ ಹುಡುಕೋಣ.. ಮೊಟ್ಟ ಮೊದಲನೆಯದಾಗಿ ಮನುಷ್ಯನ ದೈಹಿಕ ಅಂಗ ರಚನೆಯು ಆತನ ಪಾಲಕ ಡಿ ಎನ್ ಎ ಗಳಿಂದ ಅಭಿವೃದ್ಧಿಪಡಿಸಲ್ಪಟ್ಟಿದ್ದು ವಂಶ ಪಾರಂಪರ್ಯವಾಗಿ ಬಂದಿರುತ್ತದೆ. ಆದ್ದರಿಂದ ಮನುಷ್ಯನ ಎತ್ತರ, ಬಣ್ಣ, ಗಾತ್ರ, ಯೋಚನಾ ಶಕ್ತಿ ಬುದ್ಧಿ ಮುಂತಾದ ಎಲ್ಲಾ ವಿಷಯಗಳು ಆತನ ವಂಶವಾಹಿಯಿಂದ ಆತನಿಗೆ ಬಂದಿರುತ್ತದೆ. ಮೇಲಿನ ಎಲ್ಲ ಪ್ರಶ್ನೆಗಳಿಗೂ ಉತ್ತರ ಇಲ್ಲಿಯೇ ಸಿಗುತ್ತದೆ.

ಎರಡನೆಯದಾಗಿ ವ್ಯಕ್ತಿಯ ಜೀವನ ಶೈಲಿ ಆತನ ದೈಹಿಕ ಆರೋಗ್ಯದ ಮೇಲೆ ಪರಿಣಾಮವನ್ನು ಬೀರುತ್ತದೆ. ಮನುಷ್ಯನ ಅತಿಯಾದ ಆಲಸಿ ಜೀವನ, ದೈಹಿಕ ಶ್ರಮವಿಲ್ಲದ, ವ್ಯಾಯಾಮರಹಿತ ಮತ್ತು ಆರಾಮ ಕುರ್ಚಿಗೆ ಕಟ್ಟಿ ಹಾಕಿದಂತಹ ಜೀವನಶೈಲಿ ವ್ಯಕ್ತಿಯ ಬೊಜ್ಜಿಗೆ ಕಾರಣವಾಗುತ್ತದೆ.


ಅತಿಯಾದ ಸಿಹಿ, ಬೇಕರಿ ಉತ್ಪನ್ನಗಳ ಸೇವನೆ, ಮಾದಕ ಪದಾರ್ಥಗಳ ಸೇವನೆ, ಹೆಚ್ಚು ಮಸಾಲೆ ಭರಿತ ಆಹಾರ ಮತ್ತು ಹೊರಗಿನ ಸಿದ್ಧಪಡಿಸಲ್ಪಟ್ಟ ಆಹಾರಗಳ ಸೇವನೆ ವ್ಯಕ್ತಿಯ ಬೊಜ್ಜಿಗೆ ಕಾರಣವಾಗುತ್ತದೆ. ಚೂರೇ ಚೂರು ಎಂದು ಪ್ರತಿದಿನವೂ ತುಸುವೇ ತಿನ್ನುತ್ತಾ ಹೋದರೂ ಅಲ್ಲಿ ಬಳಸುವ ರುಚಿ ಕಾರಕಗಳು ರಾಸಾಯನಿಕಗಳಿಂದ ಕೂಡಿದ್ದು ಅವು ವ್ಯಕ್ತಿಯ ಜೀರ್ಣಾಂಗ ಮತ್ತು ಪಿತ್ತಕೋಶಗಳಿಗೆ ಹಾನಿಯನ್ನು ಉಂಟುಮಾಡುತ್ತದೆ. ಪ್ಯಾಕೆಟ್ಟುಗಳಲ್ಲಿ ಶೇಖರಿಸಲ್ಪಡುವ ಆಹಾರ ಪದಾರ್ಥಗಳು ಸೋಡಿಯಂ ಕ್ಲೋರೈಡ್ ಅಂಶವನ್ನು ಹೊಂದಿದ್ದು ಇದರಿಂದ ವ್ಯಕ್ತಿಯು ಅತಿಯಾದ ರಕ್ತದೊತ್ತಡ, ಬೊಜ್ಜು, ಅಜೀರ್ಣ, ಗ್ಯಾಸ್, ಅಸಿಡಿಟಿಗಳಂತಹ ಸಮಸ್ಯೆಗಳಿಗೆ ಈಡಾಗುತ್ತಾನೆ.

ಹಾಗಾದರೆ ಡಯಟ್ ಮಾಡುವುದು ತಪ್ಪೇ?? ಖಂಡಿತ ತಪ್ಪಲ್ಲ. ಈ ಜಗತ್ತಿನಲ್ಲಿ ಅತಿ ಹೆಚ್ಚು ದುರ್ಬಳಕೆಯಾಗುವ ಪದವೆಂದರೆ ಅದು ಡಯಟ್. ಡಯಟ್ ಎಂದರೆ ಪಥ್ಯ, ಹಿತಮಿತವಾದ ಆಹಾರ ಎಂದರ್ಥ. ಈ ಪಥ್ಯವನ್ನು ನಾವು ಸಮತೋಲಿತ ಆಹಾರವನ್ನಾಗಿಸಿ ನಮ್ಮ ದೇಹದ ದೈನಂದಿನ ಅವಶ್ಯಕತೆಯ ಪ್ರೋಟೀನ್, ವಿಟಮಿನ್, ಕ್ಯಾಲ್ಸಿಯಂ , ಕಾರ್ಬೋಹೈಡ್ರೇಟುಗಳನ್ನು ಸರಿಯಾದ ಪ್ರಮಾಣದಲ್ಲಿ ವಿಂಗಡಿಸಿ ಸೇವಿಸಬೇಕು. ಇದನ್ನೇ ನುರಿತ ಡಯಟೀಶಿಯನ್ ಗಳು ಮಾಡುವುದು. ನಮ್ಮ ಹಿರಿಯರು ಹಿಂದಿನ ಕಾಲದಿಂದಲೂ ಆಯುರ್ವೇದ ಶಾಸ್ತ್ರದಲ್ಲಿ ಹೇಳಿರುವಂತೆ ಈ ಪದ್ಧತಿಯನ್ನು ಚಾಚು ತಪ್ಪದೆ ನಡೆಸಿಕೊಂಡು ಬಂದಿದ್ದಾರೆ.

ನಮ್ಮ ಪೂರ್ವಜರು ಹೇಳುತ್ತಿದ್ದ ರಾತ್ರಿ ಊಟವಾದ ನಂತರದಿಂದ ಮರುದಿನ ಮುಂಜಾನೆಯ ಅಲ್ಪೋಪಹಾರ ಸೇವನೆಯವರೆಗಿನ 12 ರಿಂದ 16 ಗಂಟೆಗಳ ಮಧ್ಯಂತರ ಅವಧಿಯನ್ನು ವಿದೇಶಿಯರು ಇಂಟರ್ಮಿಟೆಂಟ್ ಫಾಸ್ಟಿಂಗ್ ಎಂಬ ಹೆಸರಿನಲ್ಲಿ ಮಾಡುತ್ತಿದ್ದಾರೆ. ವಿದೇಶಿಯರನ್ನು ಅನುಕರಿಸುತ್ತಿರುವ ನಮಗೆ ಇದು ನಮ್ಮದೇ ಪದ್ಧತಿ ಎಂದು ಅರಿವಾಗಲು ಇನ್ನೆಷ್ಟು ಕಾಲ ಬೇಕು?

ನಮ್ಮ ಆಯುರ್ವೇದದಲ್ಲಿ ಷಡ್ರಸಗಳ ಸೇವನೆ ಅತ್ಯಂತ ಅವಶ್ಯಕ ಎಂದು ಹೇಳಿದ್ದಾರೆ. ಆದರೆ ಡಯಟ್ ನ ಹೆಸರಿನಲ್ಲಿ ಒಮ್ಮಿಂದೊಮ್ಮೆಲೆ ಎಲ್ಲವನ್ನು ತ್ಯಜಿಸುವ ಕೇವಲ ಹಣ್ಣಿನ ರಸ ಸೇವನೆ ಇಲ್ಲವೇ ಮೊಳಕೆ ಕಾಳುಗಳ ಸೇವನೆ ಉಪ್ಪಿಲ್ಲದ ಊಟ ಮಾಡುವುದು ಖಂಡಿತವಾಗಿಯೂ ತಪ್ಪು. ಪ್ರತಿದಿನವೂ ಕೇವಲ ಹೊಟ್ಟೆ ಹಸಿದಾಗ ಮಾತ್ರ ಹಿತಮಿತವಾಗಿ ಆಹಾರ ಸೇವನೆ ಮಾಡುವುದು, ಹೆಚ್ಚು ತರಕಾರಿಗಳು ಮತ್ತು ಹಣ್ಣುಗಳ ಸೇವನೆ ಮಾಡುವುದು ಅಪೇಕ್ಷಣೀಯ.

ನಮ್ಮ ಪೂರ್ವಜರು ಪ್ರತಿದಿನ ಮುಂಜಾನೆ ನಿತ್ಯ ಕರ್ಮಗಳನ್ನು ಪೂರೈಸಿ ಮನೆಗೆಲಸಗಳನ್ನು ಸ್ನಾನ ಪೂಜೆಗಳ ನಂತರ ಆಹಾರ




ಸೇವನೆ ಮಾಡುತ್ತಿದ್ದರು. ಈ ಎಲ್ಲಾ ದೈಹಿಕ ಶ್ರಮದ ಕೆಲಸಗಳ ನಂತರ ಖಂಡಿತವಾಗಿಯೂ ಹೊಟ್ಟೆ ಹಸಿದು ಆಹಾರ ಸೇವಿಸುತ್ತಿದ್ದರು. ನಿರಂತರವಾದ ಚಟುವಟಿಕೆಯಿಂದ ಕೂಡಿದ ಜೀವನ ಶೈಲಿಯು ಅಜೀರ್ಣ, ಹೊಟ್ಟೆ ಉಬ್ಬರಗಳಿಗೆ ಅವಕಾಶ ಮಾಡಿಕೊಡುವುದಿಲ್ಲ.

ಹಿಂದೆಲ್ಲ ಅಮಾವಾಸ್ಯೆ ಹುಣ್ಣಿಮೆ ಹಬ್ಬ ಹರಿದಿನಗಳಲ್ಲಿ ಮಾತ್ರ ಸಿಹಿ ತಿಂಡಿಗಳನ್ನು ಮಾಡುವ ಮತ್ತು ತಿನ್ನುವ ಪರಿಪಾಠವಿದ್ದು ಯಾವುದೇ ರೀತಿಯ ಶರ್ಕರ ಪಿಷ್ಟ ಪದಾರ್ಥಗಳು ದೇಹವನ್ನು ಸೇರುತ್ತಿರಲಿಲ್ಲ. ಒಂದು ದಿನ ಹೊಟ್ಟೆ ಬಿರಿಯ ಸಿಹಿ ತಿಂದರೂ ಮುಂದಿನ ಹದಿನೈದು ದಿನಗಟ್ಟಲೆ ಮತ್ತೆ ಸಿಹಿ ಪದಾರ್ಥಗಳನ್ನು ತಿನ್ನಲು ಅವಕಾಶವಿರಲಿಲ್ಲ. ಇನ್ನು ಸ್ಥಳೀಯವಾಗಿ ಬೆಳೆಯುವ ದವಸ ಧಾನ್ಯಗಳನ್ನು ಸ್ವಚ್ಛಗೊಳಿಸಿ ಬೀಸಿ ಇಲ್ಲವೇ ಗಿರಣಿಗೆ ಹಾಕಿಸಿ ತಯಾರಿಸುವ ರೊಟ್ಟಿ, ಚಪಾತಿ ದೋಸೆಗಳು, ಗದ್ದೆಗಳಲ್ಲಿ ಬೆಳೆಯುತ್ತಿದ್ದ ಬತ್ತದಿಂದ ತಯಾ–ರಿಸಿದ ಅಕ್ಕಿ, ಮನೆಯ ಹಿತ್ತಲಿನಲ್ಲಿ ಬೆಳೆಯುತ್ತಿದ್ದ ಸೊಪ್ಪುತರಕಾರಿಗಳು, ಅವಶ್ಯಕತೆಗಳಿಗನುಗುಣವಾಗಿ ಬೆಳೆಯುವ ಕಾಳು ಕಡಿಗಳ ಸೇವನೆ ನಮ್ಮ ಆರೋಗ್ಯವನ್ನು ಕಾಯುತ್ತಿದ್ದವು.


ಎಷ್ಟೇ ಶ್ರೀಮಂತರಾದರೂ ಎಲ್ಲರ ಮನೆಯಲ್ಲಿಯೂ ಏಕರೂಪ ಆಹಾರ ಪದ್ಧತಿ ಇತ್ತು. ಹೊರಗಿನ ಊಟ ತಿಂಡಿಗೆ ಅವಕಾಶವಿಲ್ಲದೆ ಹೋಗುತ್ತಿತ್ತು.

ಬದಲಾದ ಕಾಲಘಟ್ಟದಲ್ಲಿ ಬೀದಿಗೆ 20 ತಿಂಡಿ ಅಂಗಡಿಗಳು,



ಪಾನಿಪುರಿ ಸ್ಟಾಲ್ಗಳು, ಬೇಕರಿಗಳು ಮನುಷ್ಯನ ಜಿಹ್ವಾ ಚಾಪಲ್ಯವನ್ನು ತಣಿಸುತ್ತವೆಯೇನೋ ನಿಜ ...ಆದರೆ ಆರೋಗ್ಯ??

ಮತ್ತೇನು ಮಾಡುವುದು ಬೇಕಾಗಿಲ್ಲ. ನಮಗೆ ನಾವೇ ಕೆಲವು ಪರಿಮಿತಿಗಳನ್ನು ಹಾಕಿಕೊಂಡು ಊಟದಲ್ಲಿ ಹಿತವಾದ ಮತ್ತು ಮಿತವಾದ ಆಹಾರವನ್ನು ಸೇವಿಸುತ್ತಾ ಬಾಯಿ ಚಪಲಕ್ಕೆ ಕಡಿವಾಣ ಹಾಕಿ ಶರ್ಕರ ಪಿಷ್ಟ ಪದಾರ್ಥಗಳಿಗೆ ಬೇಡ ಎಂದು ಹೇಳುತ್ತಾ ಆರೋಗ್ಯವನ್ನು ಕಾಯ್ದುಕೊಳ್ಳಬೇಕು. ಕಷ್ಟ ಆಗಬಹುದು, ನಿಜ. ಆದರೆ ಇಂದಿಗೂ ಕೆಲವು ಪಂಗಡಗಳ ಜನರು ಕಡ್ಡಾಯವಾಗಿ ಹೊರಗಿನ ಆಹಾರವನ್ನು ಬಹಿಷ್ಕರಿಸಿ ಮನೆಯಲ್ಲಿಯೇ ತಯಾರಿಸಿದ ಶುದ್ಧವಾದ ಮತ್ತು ತಾಜಾ ಆಹಾರವನ್ನು ಸೇವಿಸುತ್ತಿದ್ದಾರೆ ಪ್ರತಿ ವಾರ,15 ದಿನಗಳಿಗೊಮ್ಮೆ ಸಂಪೂರ್ಣ ಉಪವಾಸ ಮಾಡುತ್ತಾ ದೇಹದ ಜೀರ್ಣಾಂಗಕ್ಕೆ ವಿಶ್ರಾಂತಿಯನ್ನು ನೀಡುತ್ತಾ, 'ಲಂಘನಂ ಪರಮೌಶಧಂ' ಎಂಬ ತಜ್ಞರ ವಾಣಿಯಂತೆ ಜೀವಿಸುತ್ತಿದ್ದಾರೆ . ಅಪವಾದಗಳನ್ನು ಹೊರತುಪಡಿಸಿ ಅಂತಹವರ ಹತ್ತಿರ ಯಾವ ಕಾಯಿಲೆಗಳು ಸುಳಿಯುತ್ತಿಲ್ಲ. ಹಾಗಾದರೆ ನಾವು ಕೂಡ ಡಯಟ್ ಎಂಬ ಪದದ ಸರಿಯಾದ ಅರ್ಥವನ್ನು ಅರಿತು ಅದರಂತೆ ಆಹಾರ ಸೇವನೆಯ ಪದ್ಧತಿಯನ್ನು ಅನುಸರಿಸೋಣ. ಏನಂತೀರಾ?



## ಬಿಇಓ ಕಚೇರಿಯಲ್ಲಿ ಅನಾಥವಾಗಿ ಬಿದ್ದಿರುವ ಎಸ್ಸೆಸ್ಸೆಲ್ಸಿ ಪೂರ್ವಭಾವಿ ಪರೀಕ್ಷೆ ಪ್ರಶ್ನೆ ಪತ್ರಿಕೆಗಳು!

# ನಿಯಮ ಗಾಳಿಗೆ ತೂರಿದ ಶಿಕ್ಷಣ ಇಲಾಖೆ ಅಧಿಕಾರಿಗಳು!


**ಉದಯರಶ್ಮಿ ನ್ಯೂಸ್**

– ಚೇತನ ಶಿವಶಿಂಪಿ

ಮುದ್ದೇಬಿಹಾಳ: ಪರೀಕ್ಷೆ ಎಂದರೆ ವಿದ್ಯಾರ್ಥಿಗಳಿಗೆ ಎಲ್ಲಿಲ್ಲದ ಭಯ. ಪ್ರತಿಭಾನ್ವಿತ ವಿದ್ಯಾರ್ಥಿಗಳಿಗಂತೂ ಪರೀಕ್ಷೆ ಬರೆದು ಫಲಿತಾಂಶ ಬರೋವರೆಗೂ ಸಮಾಧಾನವಿರಲ್ಲ. ಪರೀಕ್ಷೆಗಳಲ್ಲಿ ಪ್ರಶ್ನೆ ಪತ್ರಿಕೆ ಕೈ ಸೇರುತ್ತಿದ್ದಂತೆ ಅಬ್ಬಾ! ನನಗೆ ಇಷ್ಟು ಮಾರ್ಕ್ಸ್ ಬರುತ್ತೆ ಅಂದುಕೊಂಡಿರ್ತಾರೆ. ಆದರೆ ಫಲಿತಾಂಶ ಬಂದಾಗ ಬೇರೆನೇ ಆಗಿರುತ್ತೆ. ಕಾಣದ ಕೈಗಳ ಕೈಚಳಕದಿಂದ ಪ್ರತಿಭಾನ್ವಿತ ವಿದ್ಯಾರ್ಥಿಗಳ ಅಂಕದಲ್ಲಿ ಏರುಪೇರಾಗಿಬಿಟ್ಟಿರುತ್ತೆ. ಮುಗ್ಧ ಮಕ್ಕಳು ಇಲಾಖೆಯ ಮೇಲೆ ವಿಶ್ವಾಸ ಇಟ್ಟು ಪರೀಕ್ಷಾ ಕೇಂದ್ರಗಳಿಗೆ ಬಂದು ಪರೀಕ್ಷೆಗಳನ್ನು ಬರೀತಾರೆ. ಆದರೆ ಕೆಲ ಕರಾಳ ಮುಖಗಳು ತಮ್ಮ ಮಗು ಎಲ್ಲರಿಗಿಂತ ಹೆಚ್ಚಿನ ಅಂಕ ಗಳಿಸಬೇಕು ಅಂತಾ ಏನೇನೋ ಕರಾಮತ್ತನ್ನ ಮಾಡಿರ್ತಾರೆ.

> "ತಾಳಿಕೋಟೆ ಭಾಗಕ್ಕೆ ವಾಹನದ ವ್ಯವಸ್ಥೆ ಕಲ್ಪಿಸಲಾಗಿದೆ. ಮುಂದಿನ ಪರೀಕ್ಷೆಯಿಂದ ಇಲ್ಲಿಯೂ ನೇರವಾಗಿ ಶಾಲೆಗಳಿಗೆ ತಲುಪಿಸುವ ವ್ಯವಸ್ಥೆ ಮಾಡುತ್ತೇನೆ."
>
> **– ಬಸವರಾಜ ಸಾವಳಗಿ,**
>
> ಬಿಇಓ ಮುದ್ದೇಬಿಹಾಳ

ಇಲಾಖೆಯವರು ಅಧಿಕಾರಿಗಳಿಗೆ ಕೆಲವು ಸುತ್ತೋಲೆಗಳನ್ನು ಕೊಟ್ಟು ಪರೀಕ್ಷೆಗಳನ್ನು ಕಟ್ಟು ನಿಟ್ಟಾಗಿ ನಡೆಸುವಂತೆ ಆದೇಶ ಮಾಡ್ತಾರೆ. ಕೆಲವು ಬಾರಿ ಕಟ್ಟು ನಿಟ್ಟಾಗಿ ಪರೀಕ್ಷೆಗಳು ನಡೆಯದೇ ಎಲ್ಲೋ ಒಂದೆಡೆ ಪ್ರಶ್ನೆ ಪತ್ರಿಕೆ ಸೋರಿಕೆಯಾಗಿ ಇಲಾಖೆಯ ಮರ್ಯಾದೆ ಮೂರು ಪಾಲಾದ್ರೂ ಮೇಲಾಧಿಕಾರಿಗಳು



ತಪ್ಪಿತಸ್ಥರ ಮೇಲೆ ಕ್ರಮ ಕೈಗೊಳ್ಳುವಲ್ಲಿ ಮೀನಮೇಷ ಎಣಿಸ್ತಾರೆ ಅನ್ನೋದು ಎಲ್ಲರಿಗೂ ಗೊತ್ತಿರುವಂಥದ್ದೇ.

ಕೆಲವು ಅಧಿಕಾರಿಗಳಿಗೆ ಪರೀಕ್ಷೆಗಳು ಬಂದ್ರೆ ಸಾಕು ದೊಡ್ಡ ಚೆಲ್ಲಾಟ. ದುಡ್ಡು ಉಳಿಸುವ ಮತ್ತು ಗಳಿಸುವದಕ್ಕಾಗಿಯೇ ಪರೀಕ್ಷೆಗಳನ್ನು ಬಂದಿವೆ ಅನ್ನೋದು ಅವರ ಭಾವನೆಯಾಗಿರುತ್ತೆ. ಕಟ್ಟು ನಿಟ್ಟಾಗಿ ಪರೀಕ್ಷೆ ನಡೆಸೋಕೆ ಇಲಾಖೆ ಸುತ್ತೋಲೆಗಳನ್ನು ಹೊರಡಿಸುತ್ತೆ. ಆದರೆ ಆ ಸುತ್ತೋಲೆಗಳು ಕೇವಲ ಕಾಗದಕ್ಕೆ ಮಾತ್ರ ಸೀಮಿತ ಎಂಬ ಸಾರ್ವಜನಿಕರ ಆರೋಪ ಮತ್ತೊಮ್ಮೆ ಸಾಕ್ಷೀಕರಿಸಿದೆ.

ಹೌದು, ಎಸ್‌ಎಸ್‌ಎಲ್‌ಸಿ ಪೂರ್ವಭಾವಿ ಪರೀಕ್ಷೆಗೆ ಸಂಬಂಧಿಸಿದ ಘಟನೆಯೊಂದು ಅಧಿಕಾರಿಗಳ ನಿರ್ಲಕ್ಷ ಮತ್ತು ಬೇಜವಾಬ್ದಾರಿತನಕ್ಕೆ ಹಿಡಿದ ಕೈಗನ್ನಡಿಯಾಗಿದೆ. ಪೂರ್ವಭಾವಿ ಪರೀಕ್ಷೆಗಳು ಅಂತಿಮ ಪರೀಕ್ಷೆಗಳಂತೆಯೇ ನಡೆಯಬೇಕು ಎಂದು ಸುತ್ತೋಲೆ ಇದೆ. ಪ್ರಶ್ನೆ ಪತ್ರಿಕೆ, ಸ್ಟಾಂಗ್ ರೂಮ್ ಸೇರಿದಂತೆ ಎಲ್ಲ ನಿಯಮಗಳನ್ನು ಪಾಲಿಸಲೇಬೇಕು. ಆದರೆ ಪೂರ್ವಭಾವಿ ಪರೀಕ್ಷೆಯ ಪ್ರಶ್ನೆ ಪತ್ರಿಕೆಗಳನ್ನು ಕಾರ್ಯಾಲಯಕ್ಕೆ ಬಂದು ಪಡೆದುಕೊಳ್ಳುವಂತೆ ತಿಳಿಸಿ ನಿಯಮಗಳನ್ನು ಗಾಳಿಗೆ ತೂರಿ ಮುದ್ದೇಬಿಹಾಳ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿ ಮತ್ತೊಮ್ಮೆ ಎಡವಟ್ಟು ಮಾಡಿಕೊಂಡಿದೆ.

ಕಳೆದ 2022 ನೇ ಸಾಲಿನಲ್ಲಿ ನಡೆದ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ನಡೆದ ಪ್ರಶ್ನೆ ಪತ್ರಿಕೆ ಸೋರಿಕೆ ಪ್ರಕರಣದಲ್ಲಿ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳುವಲ್ಲಿ ಶಿಕ್ಷಣ ಇಲಾಖೆ ಹಿಂದೇಟು ಹಾಕಿದೆ ಎಂಬ ಆರೋಪ ಬಿಸಿಯಾಗಿರುವಾಗಲೇ ಮತ್ತೊಮ್ಮೆ ನಿಯಮಗಳ ಉಲ್ಲಂಘನೆಯ



ಆರೋಪ ಹೊತ್ತಿದೆ.

ತಾಲೂಕಿನ ಬಸರಕೋಡ, ಬಳಬಟ್ಟಿ, ಯಲಗೂರ, ರೂಡಗಿ ಸೇರಿದಂತೆ ಪಟ್ಟಣದ ಎಲ್ಲ ಶಾಲೆಯವರನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯದಲ್ಲಿಯೇ ಪ್ರಶ್ನೆ ಪತ್ರಿಕೆ ಸಾಗಿಸುವ ಕಾರ್ಯ

> "ಪ್ರತಿ ಶಾಲೆಗಳಿಗೆ ಹೋಗಿ ಪ್ರಶ್ನೆ ಪತ್ರಿಕೆ ತಲುಪಿಸಬೇಕು ಎಂದು ನಿಯಮ ಇದೆ. ಕಾರ್ಯಲಯಕ್ಕೆ ಬಂದು ಪಡೆದುಕೊಳ್ಳುತ್ತಿರುವುದು ಕಾನೂನು ಬಾಹಿರ. ಮುಂದೆ ಹೀಗಾಗದ ರೀತಿಯಲ್ಲಿ ಎಚ್ಚರಿಸುವೆ."
>
> **– ಎನ್.ಎಚ್.ನಾಗೂರ.**
>
> ಡಿಡಿಪಿಐ, ವಿಜಯಪುರ

ಫೆ.27 ರಂದು ಭರದಿಂದ ಸಾಗಿತ್ತು. ಜೊತೆಗೆ ಕೆಲವಷ್ಟು ಪ್ರಶ್ನೆ ಪತ್ರಿಕೆಗಳ ಬಂಡಲ್‌ಗಳು ಅನಾಥವಾಗಿ ಬಿದ್ದಿದ್ದ ವಿಡಿಯೋ ತುಣುಕುಗಳು 'ಉದಯರಶ್ಮಿ' ಕ್ಯಾಮರಾದಲ್ಲಿ ಸೆರೆಯಾಗಿದ್ದು ಸ್ಥಳದಲ್ಲಿ ಯಾವ ಅಧಿಕಾರಿಗಳೂ ಇಲ್ಲದಿರುವುದು ನಿಯಮಗಳು ಕಾಗದಕ್ಕೆ ಮಾತ್ರ ಸೀಮಿತ ಎಂಬುದನ್ನು ಸಾರಿ ಹೇಳುತ್ತಿವೆ.

ಪ್ರಶ್ನೆ ಪತ್ರಿಕೆಗಳನ್ನು ಆಯಾ ಶಾಲೆಗಳಿಗೆ ಖುದ್ದಾಗಿ ಇಲಾಖೆ ತಲುಪಿಸಬೇಕು ಎಂದು ನಿಯಮ ಇದೆ. ಆದರೆ ಆ ನಿಯಮ ಮಾತ್ರ ಇಲ್ಲಿ ಅನ್ವಯಿಸಿಲ್ಲ. ಸಂಬಂಧಿಸಿದ ಅಧಿಕಾರಿಗಳು ಯಾವುದೇ ಜವಾಬ್ದಾ–ರಿಯುತ ಉತ್ತರ ನೀಡಿಲ್ಲ ಹಾಗಾಗಿ ಜಿಲ್ಲಾಧಿಕಾರಿಗಳು, ಶಿಕ್ಷಣ ಇಲಾಖೆಯ ಮೇಲಾಧಿಕಾರಿಗಳ ಗಮನಕ್ಕೆ ಈ ವಿಷಯ ಮುಟ್ಟಿಸೋ ಪ್ರಯತ್ನ ಮಾಡುತ್ತಿದ್ದೇವೆ.

# ಧಾರ್ಮಿಕ ಕಾರ್ಯಕ್ರಮಗಳು ಸಾಮರಸ್ಯದ ಸಂಕೇತ

**ಉದಯರಶ್ಮಿ ನ್ಯೂಸ್**



ಬ್ರಹ್ಮದೇವನಮಡು: ಧಾರ್ಮಿಕ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವುದರಿಂದ ಮನಸ್ಸಿಗೆ ಶಾಂತಿ, ನೆಮ್ಮದಿ ದೊರೆಯುತ್ತದೆ ಎಂದು ತಾಳಿಕೋಟಿಯ ಖಾಸ್ಗತೇಶ್ವರ ಮಠದ ಸಿದ್ದಲಿಂಗ ದೇವರು ಹೇಳಿದರು. ದೇವರಹಿಪ್ಪರಗಿ ತಾಲೂಕಿನ ಚಟ್ನಳ್ಳಿ ಗ್ರಾಮದಲ್ಲಿ ಮಹಾಶಿವರಾತ್ರಿ ಹಬ್ಬದ ನಿಮಿತ್ತ ಸೋಮವಾರ ರಾತ್ರಿ ಹಮ್ಮಿಕೊಂಡಿದ್ದ ಶ್ರೀ ಭಕ್ತಿಬಂಡಾರಿ ಬಸವೇಶ್ವರ ಪುರಾಣ ಪ್ರವಚನ ಪ್ರಾರಂಭೋತ್ಸವಕ್ಕೆ ಚಾಲನೆ ನೀಡಿ ಅವರು ಆಶೀರ್ವಚನ ನೀಡಿದರು.


ಹಳ್ಳಿಯ ದೇವಸ್ಥಾನಗಳಲ್ಲಿ ಜರುಗುವ ಧಾರ್ಮಿಕ ಕಾರ್ಯಕ್ರಮಗಳು ಸಾಮರಸ್ಯದ ಸಂಕೇತವಾಗಿವೆ. ಜಾತಿ ಭೇದ ಮರೆತು ಪುರಾಣ,ಪ್ರವಚನಗಳಲ್ಲಿ ಪಾಲ್ಗೊಳ್ಳುವುದರಿಂದ ಭಕ್ತಿಯ ಮನೋಭಾವ ಮನೆ ಮಾಡುತ್ತದೆ. ಮಹಾತ್ಮರ ಚರಿತ್ರೆ ಕೇಳುವುದರಿಂದ ಮನಪರಿವರ್ತನೆಯಾಗಿ ಜೀವನದಲ್ಲಿ ಧರ್ಮ ಕಾರ್ಯ ಮಾಡಲು ಪ್ರೇರಣೆಯಾಗುತ್ತದೆ. ಭಕ್ತರು ದಾನ ಮಾಡುವ ಪ್ರವೃತ್ತಿ ಬೆಳಸಿಕೊಳ್ಳಬೇಕು. ಒತ್ತಡ, ಜಂಜಾಟ ನಿವಾರಣೆಗೆ ಧಾರ್ಮಿಕ ಕ್ಷೇತ್ರಗಳು ನೆಮ್ಮದಿಯ ತಾಣವಾಗಿವೆ ಎಂದರು.

ಯಂಕಂಚಿ ಹಿರೇಮಠದ ಅಭಿನವ ರುದ್ರಮುನಿ ಶಿವಾಚಾರ್ಯರು ಅಧ್ಯಕ್ಷತೆ ವಹಿಸಿದ್ದರು. ಖಾನಾಪೂರದ ಮೌನಯೋಗಿ ಕಲ್ಯಾಣದಯ್ಯ ಸ್ವಾಮೀಜಿ, ಹೊನ್ನಳ್ಳಿಯ ಗುರುಲಿಂಗಯ್ಯ ಗದ್ದಗಿಮಠ ಸ್ವಾಮೀಜಿ, ಸಿದ್ದಯ್ಯ ಹಿರೇಮಠ ಇದ್ದರು.

ಪ್ರವಚನಕಾರ ಈರಣ್ಣ ಶಾಸ್ತ್ರಿಗಳು ಪ್ರವಚನ ನೀಡಿದರು. ಕಲ್ಲಯ್ಯ ಪಡದಳ್ಳಿ ಅವರ ಸಂಗೀತ ಸೇವೆಯೊಂದಿಗೆ ಪ್ರಾಣೇಶ ಯಡ್ರಾಮಿ ತಬಲ್ ಸಾಥ್ ನೀಡಿದರು.

ಈ ವೇಳೆ ಪತ್ರಕರ್ತ ಮಲ್ಲು ಕೆಂಭಾವಿ ಅವರನ್ನು ತಾಳಿಕೋಟಿಯ ಖಾಸ್ಗತೇಶ್ವರ ಮಠದ ಸಿದ್ದಲಿಂಗ ದೇವರು ಆಶೀರ್ವದಿಸಿದರು.

# ಹುಣಸಗಿ: ಆರ್.ವಿ.ಎನ್. ವೃತ್ತ ಉದ್ಘಾಟನೆ



**ಉದಯರಶ್ಮಿ ನ್ಯೂಸ್**

ಹುಣಸಗಿ: ಪಟ್ಟಣದಲ್ಲಿ ಫೆ.27ರಂದು ಬೆಳಿಗ್ಗೆ ಸುರಪುರದ ಜನಪ್ರಿಯ ಶಾಸಕರಾದ ದಿ॥ ಶ್ರೀ ರಾಜಾ ವೆಂಕಟಪ್ಪ ನಾಯಕ ಅವರ ವೃತ್ತ ಪಟ್ಟಣದ ಕಾಂಗ್ರೆಸ್ ಮುಖಂಡರು ಎಲ್ಲರೂ ಸೇರಿ ವೃತ್ತ ಉದ್ಘಾಟನೆ ಮಾಡಲಾಯಿತು

ಈ ಸಂದರ್ಭದಲ್ಲಿ ಕೆಪಿಸಿಸಿ ಸದಸ್ಯರಾದ ಸಿದ್ದಣ್ಣ ಮಲಗಲದಿನ್ನಿ, ಕಾಂಗ್ರೆಸ್ ಯುವ ಮುಖಂಡರು ಆರ್. ಎಂ.ರೇವಡಿ, ಕರೀಂಸಾಬ ಮುನ್ಸಿ, ಬಸವರಾಜ ನೂಲಿನ್, ಸಿಧ್ಧಾರೂಡ ನೂಲಿನ್, ಖಾಸೀಂಸಾಬ ಟೊಣ್ಣೂರ, ಶಾಂತಣ್ಣ ಮಲಗಲದಿನ್ನಿ, ಮಹಾದೇವಿ ಬೇನಾಳ ಮಠ, ಖಾಜಾ ಪಟೇಲ ಹುಣಸಗಿ, ಹಾಗೂ ರವಿ ಮಲಗಲದಿನ್ನಿ, ಇನ್ನೂ ಅನೇಕ ಕಾಂಗ್ರೆಸ್ ಮುಖಂಡರು, ಹಾಗೂ ಅಭಿಮಾನಿಗಳು ಭಾಗವಹಿಸಿದ್ದರು.

# ಶಿವ ಸೃಷ್ಟಿ ಶಿಲ್ಪಿ ವಿಜಯಕುಮಾರ್

ನಿಮಗೊಬ್ಬ ಅದ್ಭುತ ಕಲಾವಿದ ವ್ಯಕ್ತಿಯನ್ನು ಪರಿಚಯಿಸುತ್ತೇನೆ ಎಂದು ಟಿ.ಎಂ.ವೀರೇಶ್ ಅವರು ಹೇಳಿದಾಗ ಖುಷಿ ಕುತೂಹಲ ಒಟ್ಟಿಗೆ ಆಯ್ತು. ಯಾಕೆಂದರೆ ಅವರೊಬ್ಬ ಸಹೃದಯಿ ಕಲಾವಿದರಾಗಿ ಅವರದು ಯಾವಾಗಲೂ ತೀಕ್ಷ್ಣ ಗ್ರಹಿಕೆಯ ಆಯ್ಕೆಯಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಅವರ ಮಾತು ನನ್ನಲ್ಲಿ ಕುತೂಹಲ ಹೆಚ್ಚಿಸಿತು. ಒಂದು ಸಮಯ




– ಸಿದ್ಧಾಪುರ ಶಿವಕುಮಾರ್
ಲೇಖಕ–ಪತ್ರಕರ್ತ

ಪಿಕ್ಸ್ ಮಾಡಿಕೊಂಡು ನನ್ನೊಂದಿಗೆ ಮತ್ತೊಬ್ಬ ಚಿತ್ರಕಲಾವಿದರಾದ ವೆಂಕಟೇಶ ರೆಡ್ಡಿಯವರನ್ನು ಆ ಕಲಾವಿದರ ಹತ್ತಿರ ಕರೆದುಕೊಂಡು ಹೋದರು. ಮೊದಲ ನೋಟದಲ್ಲೆ ಕಲಾವಿದನ ಕಳೆ ಕಂಡಿತು. ಅವರು ನಾನು ವಿಜಯಕುಮಾರ್ ಎಂದು ಸಹಜ ಸೌಜನ್ಯದಿಂದ ಪರಿಚಯಿಸಿಕೊಂಡರು. ಅವರೊಬ್ಬ ಸಾದಾರಣ ಶಿಲ್ಪ ಕಲಾವಿದರಲ್ಲ ಎಂಬುದನ್ನು ನಮ್ಮೆದುರು 31ಅಡಿ



ಎತ್ತರದ ಸಿಮೆಂಟಿನ ಭವ್ಯವಾದ ಧ್ಯಾನಸ್ತ ಶಿವ ಪ್ರತಿಮೆ ಸಾಕ್ಷಿಕರಿಸಿತು. ಪ್ರತಿಮೆಯ ಪ್ರತಿ ಭಾಗವೂ ಶಿವ ದೇವರ ಜೀವ ಭಾವ ತನ್ಮಯತೆ ರೋಚಕವೆನಿಸಿತು. ವಿಜಯಕುಮಾರರೊಂದಿಗೆ ಹತ್ತಾರು ಕಲಾವಿದರು ಸೇರಿ ನಿರ್ಮಿಸಿದ ಈ ಕೃತಿಯೂ ನೋಡುಗರಲ್ಲಿ ಭಕ್ತಿಭಾವವನ್ನು ಮೂಡಿಸುತ್ತದೆ. ನಮ್ಮ ವೀರೇಶ್ ಅವರಂತೂ ಪ್ರತಿಮೆ ಮುಂದೆ ಎರಡು ಕೈಜೋಡಿಸಿ ಮುಗಿಯುತ್ತ ನಿಂತು ಬಿಟ್ಟರು. ಎಲ್ಲಾ ಅಂಗಾಂಗಳ ಮತ್ತು ಅವುಗಳ ಜೀವಂತಿಕೆಯನ್ನು ಬಹಳ ಶ್ರದ್ಧೆ ಶ್ರಮವಹಿಸಿ ವಿಜಯಕುಮಾರ್ ನಿರ್ಮಿಸಿರುವುದು ಸ್ಪಷ್ಟವಾಗಿ ಕಾಣಬಹುದು.ಚಿತ್ರದುರ್ಗದ ಜೋಗಿಮಟ್ಟಿಯ ರಸ್ತೆಯ ತಿಮ್ಮಣ್ಣ ನಾಯಕನಕರೆಗೆ ಹೋಗುವ ದಾರಿಯ ಆರಂಭಿಕ ಸ್ಥಳದಲ್ಲಿ ಶಿವ ದೇವಸ್ಥಾನದ ಮೇಲ್ಭಾಗದಲ್ಲಿ ನಿರ್ಮಿಸಲಾಗಿದೆ. ಈ ಶಿಲ್ಪ ಕಾರ್ಯಕ್ಕೆ ಒಂದು ವರ್ಷಗಳ ಸಮಯದ ಶ್ರಮ ವ್ಯಯಿಸಬೇಕಾಯ್ತು. "ದೇವಸ್ಥಾನದ ಕಮಿಟಿಯವರು ನಮ್ಮ ತಂಡಕ್ಕೆ ಸಂಪೂರ್ಣವಾಗಿ ಸಹಕಾರ ಕೊಟ್ಟಿದ್ದಕ್ಕಾಗಿ ಶಿವ ಪ್ರತಿಮೆ ಅದ್ಭುತವಾಗಿ ಮೂಡಿಬರಲಿಕ್ಕೆ ಸಾಧ್ಯವಾಯ್ತು" ಎಂದು ಶಿಲ್ಪಿ ವಿಜಯಕುಮಾರ್ ಸಂತಸದಿಂದ ಹೇಳಿಕೊಂಡರು. ಹೌದೌದು, ಕಲಾವಿದರ ಕಲ್ಪನೆ ಕ್ರಿಯಾಶೀಲತೆ ನೈಜವಾಗಿ ರೂಪಗೊಳ್ಳಲು ಅದರದೇ ಆದ ವ್ಯವಸ್ಥಿತ ಸಹಕಾರ ಬೇಕು. ಆಗಲೇ ಜನಮನ್ನಣೆಗೆ ಪಾತ್ರವಾಗುವಂತಹ ಕಲಾಕೃತಿಗಳು ತಲೆ ಎತ್ತಲು ಸಾಧ್ಯ. ಇದು ಇಲ್ಲಿ ಸಾಬೀತಾಗಿದೆ ಎಂದು ಶಿವನ ಪ್ರತಿಮೆಯೆ ಮೌನವಾಗಿಯೇ ಹೇಳುತ್ತಿತ್ತು. ಇಂತಹದೊಂದು 31ಅಡಿ ಎತ್ತರದ ಪ್ರತಿಮೆ ನಿರ್ಮಿಸಿದ ವಿಜಯಕುಮಾರ್ ಅವರ ಹಿನ್ನೆಲೆ ಅರಿಯಲು ಪ್ರಶ್ನಿಸಿದಾಗ, ಅವರು ರಾಮನಗರದಲ್ಲಿ ಹುಟ್ಟಿ ಶಿವಮೊಗ್ಗದಲ್ಲಿ ಬೆಳೆದವರೆಂದು ತಿಳಿಯಿತು. ಹಾಗೆ ಅವರ ಶಿಲ್ಪಕಲೆಯ ಆಸಕ್ತಿಗೆ ಗುಣವಂತೆ ಊರಿನ ಗುಣವಂತೇಶ್ವರ ಭಟ್ ಎಂಬ ಪರಿಣಿತ ಶಿಲ್ಪಿಗಳಿಂದ ವಿಜಯಕುಮಾರ್ ಶಿಲ್ಪಕಲೆಯನ್ನು ಅನೇಕ ವರ್ಷಗಳ ಕಾಲ ಅಭ್ಯಾಸಿದರು. ಗುಣವಂತೇಶ್ವರರೇ ನನಗೆ ಗುರುವೆಂದು ಅಭಿಮಾನದಿಂದ ಸ್ಮ–ರಿಸುತ್ತಾರೆ. ಮುಂದುವರಿದು ಹಲವಾರು ಕಡೆ ಶಿಲ್ಪಕಲಾ ಸುಮಾರು 22 ವರ್ಷಗಳ ಕಲಾಸೇವೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಅಯೋಧ್ಯದ ಶ್ರೀರಾಮ ರಾಮಲಲ್ಲ ಪ್ರತಿಮೆ ಕೆತ್ತನೆ ಮಾಡಿ ಪ್ರಸಿದ್ಧಿಯಾದ





ಅರುಣ್ ಯೋಗಿರಾಜ್ ಮತ್ತು ಜಿ. ಎಲ್. ಭಟ್ ಅವರಿಗೆ ವಿಜಯಕುಮಾರ್ ಆತ್ಮೀಯರಾಗಿದ್ದಾರೆ. ಸ್ನೇಹ ಪರತೆಯೊಂದಿಗೆ ಅಧ್ಯಯನದ ಆಸಕ್ತಿ ಇರುವ ವಿಜಯಕುಮಾರ್ ಕುವೆಂಪುರವರ 'ರಾಮಾಯಣ ದರ್ಶನಂ' ಮತ್ತು ಡಿವಿ–ಜಿಯವರ 'ಮಂಕುತಿಮ್ಮನ ಕಗ್ಗ' ಕಾವ್ಯಕ್ಕೆ ಅತ್ಯಂತ ಪ್ರಭಾವಿತರಾಗಿರುವುದನ್ನು ಅವರೇ ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ. ಶಿಲ್ಪಶಾಸ್ತ್ರಕ್ಕೆ ಶಿಲ್ಪಕಲೆಗೆ ಅದರದೇ ಆದ ಇತಿಹಾಸವಿದೆ. ಇದರಲ್ಲಿ ಪರಿಣಿತಿಗೊಳ್ಳಲು ವಿಶೇಷ ಸ್ವಭಾತಃ ಗುಣಧರ್ಮಗಳು ಬೇಕು. ಅಧ್ಯಯನಶೀಲತೆ, ಸೃಜನಾತ್ಮಕ ಚಿಂತನೆ, ಜೊತೆಗೆ ಶ್ರದ್ಧೇ ಶ್ರಮದ ಕಲಾಸಕ್ತಿ ಅತ್ಯಗತ್ಯ. ಈ ವಿಶೇಷಣಗಳನ್ನು ಮೈಗೂಡಿಸಿಕೊಂಡು ಶಿಲ್ಪಕಲಾಕ್ಷೇತ್ರದಲ್ಲಿ ಸೇವೆ ಸಲ್ಲಿಸಿರುವ ಇವರಿಗೆ ಇದುವರೆಗೆ ಯಾವ ಪ್ರಶಸ್ತಿ ಪುರಸ್ಕಾರಗಳು ಬಂದಿಲ್ಲದೇ ಇರುವುದರ ಬಗ್ಗೆ ವಿಜಯಕುಮಾರ್ ಅವರಿಗೆ ಕಿಂಚಿತ್ತೂ ಬೇಸರವಿಲ್ಲ. ನಿಮ್ಮ ಕಲೆ ಸಾಧನೆಯನ್ನು ಸಂಘ ಸಂಸ್ಥೆಗಳು ಗುರುತಿಸಿ ಗೌರವಿಸಲಾಗಿದೆಯ..? ಎಂದರೆ, ಕಲಾವಿದರಿಗೆ ಹೊರಗಿನ ಆನಂದಕ್ಕಿಂತ ಒಳಗಿನ ಆನಂದವೇ ಬಹುಮುಖ್ಯವೆಂದು ಎದೆ ಮುಟ್ಟಿಕೊಳ್ಳುತ್ತಾರೆ ಶಿಲ್ಪಿ ವಿಜಯಕುಮಾರ್. ಕಲೆ ಕಲಾವಿದರ ಪರಂಪರೆ ಬೆಳೆಯಲು ಮತ್ತಷ್ಟು ಶಿಲ್ಪ ಕಲಾಕ್ಷೇತ್ರ ವಿಸ್ತಾರವಾಗಲು ಸರ್ಕಾರ ಸಂಘ ಸಂಸ್ಥೆಗಳು ಪ್ರೇರೇಪಿಸಿ ಸಹಕ–ರಿಸುವ ಸಲುವಾಗಿ ಶ್ರಮಿಕ ಶಿಲ್ಪಕಲೆಯ ಕಲಾವಿದರನ್ನು ತಕ್ಕದಾಗಿ ಗುರುತಿಸಿ ಗೌರವಿಸಬೇಕಿದೆ.



# ಆಧ್ಯಾತ್ಮಿಕ ಪ್ರವಚನಗಳಿಂದ ಮಾನಸಿಕ ನೆಮ್ಮದಿ

**ಉದಯರಶ್ಮಿ ನ್ಯೂಸ್**



ಚಡಚಣ: ಆಧ್ಯಾತ್ಮಿಕ ಪ್ರವಚನಗಳು ಮನುಷ್ಯನಿಗೆ ಮಾನಸಿಕ ನೆಮ್ಮದಿಯನ್ನು ನೀಡಿ ಸಾತ್ವಿಕ ಜೀವನ ನಡೆಸಲು ಶಕ್ತಿಯನ್ನು ನೀಡುತ್ತವೆ ಎಂದು ಕಾತ್ರಾಳದ ಗುರುದೇವ ಆಶ್ರಮದ ಅಮೃತಾನಂದ ಶ್ರೀಗಳು ಹೇಳಿದರು.

ಸಮೀಪದ ಜೀರಂಕಲಗಿ ಗ್ರಾಮದಲ್ಲಿ ಹತ್ತು ದಿನಗಳವರೆಗೆ ನಡೆದ ಪ್ರವಚನ ಕಾರ್ಯಕ್ರಮದ ಕೊನೆಯ ದಿನ ಶ್ರೀಗಳು ಭಕ್ತರನ್ನು ಉದ್ದೇಶಿಸಿ ಅವರು ಆಶೀರ್ವಚನ ನೀಡಿದರು.

ಹತ್ತು ದಿನಗಳವರೆಗೆ ಬೆಳಗ್ಗೆ 6.30 ರಿಂದ 7.30 ರ ವರೆಗೆ ಶ್ರೀಗಳು ವಿವಿಧ ಶರಣರ ವಚನಗಳನ್ನು ಮತ್ತು ಸಿದ್ದೇಶ್ವರ ಶ್ರೀಗಳ ಜೀವನ ಮತ್ತು ಪ್ರವಚನಗಳ ಕೆಲವು ಭಾಗಗಳನ್ನು ವಿಶ್ಲೇಷಣೆ ಮಾಡುತ್ತ ಭಕ್ತರಿಗೆ ಆಧ್ಯಾತ್ಮಿಕ ಜ್ಞಾನವನ್ನು ಉಣಬಡಿಸಿದರು.

ಕಿಸೆ ಇಲ್ಲದ ಸಂತ ನಾಡಿನಗುರು ಸಿದ್ದೇಶ್ವರ ಶ್ರೀಗಳ ಬದುಕು ನಮ್ಮೆಲ್ಲರಿಗೆ ಆದರ್ಶಪ್ರಾಯವಾಗಿದೆ. ನಿಸರ್ಗದಲ್ಲಿ ದೇವರನ್ನು ಕಾಣುವ ಇವರು ಅವರ ತತ್ವಾದರ್ಶ ನಮ್ಮೆಲ್ಲರಿಗೆ ಪೂರಕವಾಗಿ, ಅವರ ಪ್ರವಚನಗಳ ಧ್ವನಿ ಸುರಳಿಯನ್ನು ದಿನಂಪ್ರತಿ ಕೇಳಿ ಆನಂದಪಡೋಣ ಎಂದರು.

ಕಾರ್ಯಕ್ರಮದಲ್ಲಿ ಜ್ಞಾನ ಯೋಗಾಶ್ರಮದ ಅನೇಕ ಶ್ರೀಗಳು ಭಾಗವಹಿಸಿ ಪ್ರತಿದಿನ ತಮ್ಮ ಪ್ರವಚನ ನೀಡಿದರು.

ಜೀರಂಕಲಗಿ ಮತ್ತು ಸುತ್ತಮುತ್ತಲಿನ ನೂರಾರು ಗ್ರಾಮಗಳ ಸಾವಿರಾರು ಭಕ್ತರು ಪ್ರತಿದಿನ ಪ್ರವಚನ ಕಾರ್ಯಕ್ರಮದಲ್ಲಿ ಭಾಗವಹಿಸಿ ಶ್ರೀಗಳ ಪ್ರವಚನವನ್ನು ಆಲಿಸಿದರು.

**ಉದಯರಶ್ಮಿ ದಿನಪತ್ರಿಕೆ**

## ಕಾವ್ಯರಶ್ಮಿ

– ಚೈತ್ರೆ

("ನಮ್ಮ ಕಥಾ ಅರಮನೆ" ಬರಹಗಾರರು)



ಮೂಡಣದಿ ರವಿ ಮೂಡಿದ
ಹೊಂಬೆಳಕಲಿ ತಾನಾಡಿದ
ತಮವ ಬದಿ ಸರಿಸಿ ಬಂದು
ಜಗದಂಗಳಕೆ ಬೆಳಕ ನೀಡಿದ

ಮಂಜಿನ ನಸು ಘಳಿಗೆಯಲಿ
ಹಸಿರೆಲೆಗಳ ಮಳಿಗೆಯಲಿ
ಜಡತನವ ಬಡಿದೋಡಿಸಿ
ಚೈತನ್ಯದ ತಂಬೆಲರ ತೀಡಿದ

ಸ್ವರ್ಣ ಕಾಂತಿಯನು ಬೀರಿ
ಹೊಳೆವ ಕಿರಣಗಳ ತೋರಿ
ಮನದ ಅಲಸಿತನವ ಸರಿಸಿ
ಉಲ್ಲಾಸದ ಸುಧೆ ಹೂಡಿದ.

ಹಗಲಲೂ ಬೆಳಗೋ ದೀಪ
ನೋಡಿವನ ಶಾಂತ ರೂಪ
ಜೀವನದ ಗತಿಗೆ ಜೀವವು
ತಾನಾಗಿ ಜಗದಿ ಸರಿದಾಡಿದ



**Printed by:** AVINASH BIDARI, **Published and Onwed by:** SHAILA INDUSHEKHAR MANUR **Printed at:** ARUN OFFSET PRINTERS,No.23, Sanjaygandhi Nagar, Indi Road, Vijayapura - 586101, Vijayapura Dist., Karnataka. **Published at:** At No.14, Silk City, Near Varasiddi Vinayaka Temple, Atalatti Link Road, Vijayapura -586102, Vijayapura Dist., Karnataka..**Editor :** INDUSHEKHAR MANUR